TIGHT BINDING BOOK

TEXT PROBLEM
WITHIN THE
BOOK ONLY
TEXT FLY WITHIN
THE BOOK ONLY

UNIVERSAL
LIBRARY
OU_198380
UNIVERSAL
LIBRARY

ನಿಜಾಮ ಸರಕಾರದ ಮಂತ್ರಿಶ್ರೇಷ್ಠರೂ
ಕೊಪ್ಪಳ ಜಾಗೀರಿಯ ನವಾಬರೂ
ಆದ

# ಸಾಲಾರಜಂಗ ಬಹದ್ದೂರ
## ಇವರ ಚರಿತ್ರೆ.

ಈ ಗ್ರಂಥವು
ಭಾಗ್ಯೋದಯ ಪಂಚಾಂಗಕರ್ತರಾದ
ಜ್ಯೋತಿರ್ವಿದ್ಯಾಭೂಷಣ,
**ಪಂಡಿತ ಶ್ರೀ ವೀರನಗೌಡರು ಡಿ. ಎಸ್. ಪಾಟೀಲ ಮೆಣಸಿಗಿ,**
ಬೂದಗುಪ್ಪಾ, ( ಜಿಲ್ಲಾ ಕೊಪ್ಪಳ )
ಇವರಿಂದ ರಚಿಸಲ್ಪಟ್ಟು,

**ಮಿರ್ಜಾ, ಮೀರ ಸರಫರಾಜ ಅಲಿ,**
(B. A., H. DIP. Ed. (Dublin).
**ಮೋಹತಮೀಮಸಾಹೇಬ ತಾಲೀಮಾತ ಕೊಪ್ಪಳ**
ಇವರಿಂದ ಪರಿಶೋಧಿಸಲ್ಪಟ್ಟಿತು.

ಮುದ್ರಕರು :-
ಏ. ಆರ್. ಶಿವನಾಗಪ್ಪನವರ, ವಾಗ್ವಿಲಾಸ ಮುದ್ರಣಾಲಯದಲ್ಲಿ
ಬಿ. ಪಿ. ಜಕ್ಕನಗೌಡರ ಇವರಿಂದ ಮುದ್ರಿಸಲ್ಪಟ್ಟಿತು.

ಪ್ರಕಾಶಕರು :-
ಶ್ರೀ. ಚನ್ನಪ್ಪ ಪರಪ್ಪ ಮಾಳಶೆಟ್ಟಿ ಗದಗ, ಇವರಿಂದ
ಗದಗ ಭಾಗ್ಯೋದಯ ಪಂಚಾಂಗಮಂದಿರದಲ್ಲಿ ಪ್ರಕಾಶಿಸಲ್ಪಟ್ಟಿತು.

೧೯೪೧ನೇ ಇಸ್ವಿ. ] ಕಾಪಿರೈಟ್ ರಜಿಸ್ಟರ್ಡ. [ ಬೆಲೆ ೬ ಆಣೆ.

ಈ ಗ್ರಂಥದ ಸರ್ವಾಧಿಕಾರವು ಗ್ರಂಥಕರ್ತ ಮತ್ತು ಪ್ರಕಾಶಕರಿಂದ ಕಾ[illegible]ಲ್ಪಟ್ಟಿದೆ.

# ನನ್ನ ಎರಡು ಮಾತು.

ನಮ್ಮ ಪ್ರೀತಿಯಗೆಳೆಯರೂ ಉಜ್ವಲ ಕನ್ನಡ ಭಕ್ತರೂ ಸುಪ್ರಸಿದ ಜ್ಯೋತಿಷಿಗಳೂ ಭಾಗ್ಯೋದಯ ಪಂಚಾಂಗದ ಸಂಪಾದಕರೂ ಆದ ಶ್ರೀಯುತ ವೀರನಗೌಡರು ಬರೆದ ನಮ್ಮ ನವಾಬಸಾಹೇಬರ ಚರಿತ್ರೆಯನ್ನು ಅವಲೋಕಿಸಿದ್ದಾಯಿತು. ನಮ್ಮನ್ನಾಳುವ ಮಹಾಪ್ರಭುಗಳಾದ **ನವಾಬ ಸಾಹೇಬರ** ದಿವ್ಯಜೀವನದ ಚರಿತ್ರೆ, ಅವರ ಆಡಳಿತೆಗೆ ಸಂಬಂಧಿಸಿದ ಸಂಸ್ಥಾನದ ಪರಿಚಯ, ಸಂಸ್ಥಾನದಲ್ಲಿ ಅವರಿಂದಾದ ಶಿಕ್ಷಣದ ಪ್ರಗತಿ ಜನಹಿತದ ಪ್ರಯೋಜನದ ಕಾರ್ಯಗಳೂ ಮುಂತಾದವುಗಳನ್ನೆಲ್ಲ ಈ ಚಿಕ್ಕಹೊತ್ತಿಗೆಯಲ್ಲಿ ಎತ್ತಿ ತೋರಿಸಿದ್ದಾರೆ. ಗ್ರಂಥವನ್ನು ಓದಿದಂತೆಲ್ಲ ನಮ್ಮ ಪ್ರಭುಗಳ ಔದಾರ್ಯ ಸಹನ ಶೀಲತೆ, ಸೌಜನ್ಯ ವಿದ್ಯಾಪ್ರೇಮ, ದಾನಧರ್ಮಗಳಲ್ಲಿಗುವ ಅವರ ಆಸಕ್ತಿ ಮುಂತಾದವುಗಳನ್ನು ನಾವು ಕಂಡು ಕೊಳ್ಳುತ್ತೇವೆ.

ಸಾಹಿತ್ಯ ಕ್ಷೇತ್ರದಲ್ಲಿ ನಮ್ಮ ನಿಜಾಮ ಕರ್ನಾಟಕವು ಬರಡು ಭೂಮಿ. ಕನ್ನಡ ಪುಸ್ತಕಗಳಂತೂ ಹೊರಡುವಂತಿಲ್ಲಾ ಹಲಕೆಲವು ಹೊರಬಿದ್ದರೂ ಬೇರೆ ಬೇರೆ ವಿಷಯಗಳಿಗೆ ಮತ್ತು ಸಂಸ್ಥಾನಕ್ಕೆ ಸಮ್ಮಂಧಿಸಿಪ ಸ್ಥಿತಿಯಲ್ಲಿ ಪ್ರಕಟಿಸಲ್ಪಟ್ಟಿವೆ. ಆದರೆ ಶ್ರೀಯುತರು ಹೊರಗಿನವರಾದರೂ ಒಳಗಿನವ ರನ್ನು ನಾಚಿಸುವಂತೆ ನಮ್ಮ ಸಂಸ್ಥಾನದಲ್ಲಿ ಪ್ರವಾಸಗೊಂಡು ನವಾಬರ ಮನೆತನದ ಮೂಲಚರಿತ್ರೆ, ಇಲ್ಲಿಯವರೆಗೆ ಆಳಿದವರ ವಂಶಾವಳಿ ಮತ್ತು ಸಂಸ್ಥಾನದ ಆಡಳಿತೆಯ ಪದ್ಧತಿ, ಶಿಕ್ಷಣಪ್ರಸಾರ, ಆದಾಯವೆಚ್ಚ ಮುಂತಾ ದವುಗಳನ್ನು ಅಂಕಿ ಸಂಖ್ಯೆಗಳಿಂದ ಉದ್ಧರಿಸಿದ್ದಾರೆ. ಇದನ್ನು ನೆನೆದರೆ ಅವರು ಪಟ್ಟ ಶ್ರಮ, ಸಾಹಸಗಳು, ನಮಗೆ ಗೋಚರವಾಗುವವು. ಮಕ್ಕಳ ಅಭ್ಯಾಸಕ್ಕೆ ಸರಿಯಾಗಿರುವದರಿಂದ ಭಾಷೆಯಲ್ಲಿ ಅಷ್ಟೊಂದು ಬಿಗುವು ಕಡಿಮೆ ಆದರೂ ಚರಿತ್ರೆಯ ದೃಷ್ಟಿಯಿಂದ ನಾವು ಓದಬೇಕು ಇಷ್ಟೊಂದು ಶ್ರಮವಹಿಸಿ ಬರೆದ ಪುಸ್ತಕವನ್ನು ನಿಜಾಮ ಸರಕಾರದ ಪಠ್ಯಪುಸ್ತಕ ಮಂಡಳಿಯವರು ಇದನ್ನು ಪಠ್ಯಪುಸ್ತಕವನ್ನಾಗಿ ಮಾಡುವರೆಂದು ನಾನು ಆಶಿಸುತ್ತೇನೆ.

**ಇಟಗಿ,** **ಬಸವಲಿಂಗನಗೌಡಾ ಪಾಟೀಲ,**

**ಶಕೆ ೧೮೬೨ ನೇ ಶ್ರಾವಣ** **ಮೌಜೆ ಇಟಗಿ.**


# ಘನವಂತ ನಮ್ಮ ನಿಜಾಮ ಪ್ರಭುಗಳು.



H. E. H. ನವಾಬ ಮೀರ ಸರ್ ಉಸ್ಮಾನ ಅಲೀಖಾನ ಬಹದ್ದೂರ
ಮುಮಾಲಿಕ ಮಹರೂಸಾ ಸರಕಾರ ಆಲಿ,
ಹೈದರಾಬಾದ (ದಕ್ಷಿಣ).

ನಮ್ಮನ್ನಾಳುವ, ಕೊಪ್ಪಳದ

## H E ನವಾಬ ಸಾಲಾರಜಂಗ ಬಹದ್ದೂರ.



**ನವಾಬ ಯೂಸೂಫ ಅಲೀಖಾನ ಬಹದ್ದೂರರು.**

ಜನನ ೧೩-೬-೧೮೮೯ನೆಯ ಇಸ್ವಿ ೩-೪೦ ಬೆಳಿಗ್ಗೆ.

# ಅರ್ಪಣ ಪತ್ರಿಕೆ.

★

H. E. ನವಾಬ ಸಾಲಾರಜಂಗ ಬಹದ್ದೂರರವರು ಜಾಗೀರಿಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ ದಾನ-ಧರ್ಮ ಪರೋಪಕಾರಿಗಳಾಗಿಯೂ, ದೇವತಾ ಭಕ್ತಿಯುಳ್ಳವರಾಗಿಯೂ ಪ್ರಜೆಗಳ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಿಟ್ಟು ಕೀರ್ತಿಶಾಲಿಗಳಾಗಿಯೂ, ಇರುವ ಸೌಜನ್ಯ ಔದಾರ್ಯಾದಿ ಸದ್ಗುಣಗಳಿಂದೊಪ್ಪುವ ಕೊಪ್ಪಳ ಜಾಗೀರಿಯ ನವಾಬರೂ ನಿಜಾಮು ಸರಕಾರದ ಮಾಜಿ ಮಂತ್ರಿಶ್ರೇಷ್ಠರೂ ಆದ

**ನವಾಬ ಯುಸುಫ್ ಅಲೀಖಾನ ದೊರೆಗಳಿಗೆ,**

**"ಸಾಲಾರಜಂಗ ಬಹದ್ದೂರರ ಚರಿತ್ರೆ"**

ಎಂಬ

ಈ ಪುಷ್ಪವನ್ನು ಅತ್ಯಂತ ಪ್ರೇಮಪುರಸ್ಸರ ಭಕ್ತಿಯಿಂದ ಅರ್ಪಿಸಿರುವೆನು.

ಬೂದಗುಪ್ಪಾ<br>ತಾಲೂಕ-ಕೊಪ್ಪಳ<br>26-5-1941

ತಮ್ಮ ರಾಜನಿಷ್ಠೆಯ,<br>**ಪೀರನಗೌಡಾ ಪಾಟೀಲ ಮೊಣಶಿಗಿ**<br>ಗ್ರಂಥಕರ್ತ.

# ಮುಂದೋಲೆ.

ಸುಪ್ರಸಿದ್ಧ ಮೆಹರ್ಬಾನ ಸಾಲಾರಜಂಗ ಬಹದ್ದೂರರವರ ವೈಭವ ಸಂಪನ್ನವಾದ ಮನೆತನದ ಐತಿಹಾಸಿಕ ಸಂಗತಿಗಳು ಈ ಚಿಕ್ಕ ಗ್ರಂಥದಲ್ಲಿ ಸಂಗ್ರಹಿಸಲ್ಪಟ್ಟಿವೆ. ಇವುಗಳ ಪರಿಚಯಕ್ಕಾಗಿ ಮುಂದೋಲೆಯು ಅನವಶ್ಯಕವೇ ಸರಿ. ಹೈದರಾಬಾದಿನಲ್ಲಿಯ ಹಿಂದುಸ್ಥಾನದ ಇತಿಹಾಸಜ್ಞರಿಗೆ ಮಾತ್ರವಲ್ಲದೆ, ಇಡೀ ಭೂಮಂಡಲದವರಿಗೆ ಈ ಸಂಗತಿಗಳು ಚೆನ್ನಾಗಿ ಅರಿತವುಗಳಾಗಿವೆ.

"ನಿಮ್ಮ ಸಾಲಾರಜಂಗರು ಒಂದು ವಿಚಿತ್ರವಾದ ವ್ಯಕ್ತಿಯು, ಇವರು ದೊಡ್ಡವರು, ಮನರಂಜಕರು" ಎಂಬುದಾಗಿ ನಾನು ಯುರೋಪಿನಲ್ಲಿರುವಾಗ, ನನ್ನ ಚಿಕ್ಕ ಸ್ನೇಹಿತರಾದ ಬಾಲ ಬಾಲಿಕೆಯರು ಉಚ್ಚರಿಸಿದ ಮಾತುಗಳ ನೆನಹು ನನಗೆ ಆಗಾಗ್ಗೆ ಬರುತ್ತದೆ.

ಹಿಂದವಾಸಿಗಳಾದ ನಮಗೆ ಇದೊಂದು ಹುರುಪಿನ ಉಗಮಸ್ಥಾನವಾಗಿದೆ. ಇಂಥ ಮಹಾಪುರುಷರಾದ **ನವಾಬ ಮೀರ ಯುಸುಫ ಅಲಿಖಾನ**ರಾದ ಸದ್ಯದ **ಸಾಲಾರ ಜಂಗಬಹದ್ದೂರರವರು** ನಮಗೆ ದೊರೆತಿರುವದು ನಮ್ಮ ಭಾಗ್ಯೋದಯವೆಂದೇ ಭಾವಿಸಬೇಕು. ಪ್ರಖ್ಯಾತ ಪರಂಪರೆಯುಳ್ಳ ಈ ಮಹಾನುಭಾವರು ನಮ್ಮ ಅಭಿಮಾನ ಹಿರಿಮೆಗಳಿಗೆ ಗುರಿಯಾಗಿರುವರು. ಬಂದಿಗಳಂತೆ ಹಣದಾಶೆಯಿಂದ ನಾವು ಇವರನ್ನು ಸ್ತುತಿಸುತ್ತಿರುವದಿಲ್ಲ, ಆದರೆ ಅವರ ದಿವ್ಯ ಸಂಸ್ಕೃತಿ ಬಡಬಗ್ಗರ ಮೇಲಿನ ಅವರ ದಯೆ, ಹಾಗೂ ಸಹಾನುಭೂತಿಗಳೇ ನಮ್ಮನ್ನು ಮೋಹಗೊಳಿಸಿವೆ.

ವಿಮರ್ಶೆಗೆ ಅರ್ಪಿಸಲ್ಪಟ್ಟ ಈ ಚಿಕ್ಕ ಗ್ರಂಥದಲ್ಲಿ ಮೇಲ್ಕಂಡ ಸುಪ್ರಸಿದ್ಧ ಸಂಗತಿಗಳು ಕೂಲಂಕಷವಾಗಿ ಚಿತ್ರಿಸಲ್ಪಟ್ಟಿವೆ.

**ಮಿರ್ಝಾ ಸರಫರಾಜಅಲಿ**
ಬಿ. ಎ. ಎಚ್. ಡಿಪ್. ಇಡಿ (ಡಬ್ಲಿನ್)
ಇನ್‌ಸ್ಪೆಕ್ಟರ,
**ವಿದ್ಯಾಖಾತೆ ಜಿಲ್ಲಾ ಕೊಪ್ಪಳ.**
(ತಾಲೀಮಾತ ಮೋಹತಮೀಮ್)

## ಕೊಪ್ಪಳದ ಹೈಸ್ಕೂಲ ಹೆಡ್ ಮಾಸ್ತರ



**ಮಿರ್ಜಾ ಮೀರ ಸರಫರಾಜ ಅಲೀ**

ಬಿ. ಎ. ಎಚ್. ಡಿಪ್. ಇಡ. ( ಡಬ್ಲಿನ್ )

ಮೋಹತಮೀಮುಸಾಹೇಬ ತಾಲೀಮಾತ (ಜಿ. ಕೊಪ್ಪಳ)

# ವಿಮರ್ಶೆ.



ಶ್ರೀಮಂತ ಅಮರಪ್ಪ ದೇಸಾಯರು ಮುದಗಲ್ಲ.

ಈ ಚಿಕ್ಕ ಗ್ರಂಥವನ್ನು ನಾನು ಓದಿ ನೋಡಿದೆನು ಈ ಗ್ರಂಥವು ಬಲು ಸೊಗಸಾಗಿದೆ. ಸಾಲೆಯ ಹುಡುಗರಿಗೆ ಪಠ್ಯ ಪುಸ್ತಕವಾಗಲು ಯೋಗ್ಯವಾಗಿದೆ.

“ **ನವಾಬ ಸಾಲಾರಜಂಗ ಬಹದ್ದೂರರ** ” ಚರಿತ್ರೆ ಎಂಬ ಸೀಯು ಎಷ್ಟು ಸವಿದರೂ ತೀರದೆ ಓದುಗರ ಮನಸ್ಸು ಸೆಳೆಯುತ್ತಿರುವದು. ಗ್ರಂಥ **ಕರ್ತರಂತೂ ಪುರಾಣ, ನಾಟಕ, ಜ್ಯೋತಿಷ್ಯಗ್ರಂಥ, ಪಂಚಾಂಗ ಇತ್ಯಾದಿ** ಗ್ರಂಥಗಳ **ಕರ್ತರೆಂದಮೇಲೆ** ಹೇಳುವದೇನು! ಅವರ ಹೆಸರು ಈ ಗ್ರಂಥದ ದ್ವಾರದಿಂದ ಲೋಕಪ್ರಿಯವಾಗುವದರಲ್ಲಿ ಸಂದೇಹವಿಲ್ಲ.

**ಕ್ಯಾಂಪ ಕೊಪ್ಪಳ**
**ಶಕ ೧೮೨೨ ವಿಕ್ರಮ ಸಂ॥**
**ಮಾಘ ಶು॥ ೧**

**ಅಮರಪ್ಪ ದೇಸಾಯಿ,**
ಮುದಗಲ್ಲ ಕ್ಯಾಂಪ ಕೊಪ್ಪಳ.

# ಆಜ್ಞಾಪತ್ರ.

★

ಪ್ರಿಯ ಸಹೋದರ, ನನ್ನ ಚಿಕ್ಕ ತಮ್ಮ ಗ್ರಂಥಕರ್ತನಾದ ವೀರನಗೌಡನಿಗೆ—

ನೀನು ಬರೆದಿರುವ ಈ ಚರಿತ್ರೆಯನ್ನು ಓದಿ ನೋಡಿದೆನು. ಕನ್ನಡ ವಾಙ್ಮಯದಲ್ಲಿ ಕನ್ನಡಿಗರನ್ನಾಳುವ ಈ ಮಹಾಪುರುಷ **ನವಾಬ ಸಾಲಾರ ಜಂಗ ಬಹದ್ದೂರರ ಚರಿತ್ರೆ**ಯು ಕನ್ನಡ ಭಾಷೆಯಲ್ಲಿ ಇರಬೇಕಾದುದು ಅತ್ಯವಶ್ಯ. ಕನ್ನಡ ಪ್ರಾಥಮಿಕ ವಿದ್ಯಾರ್ಥಿಗಳು ಈ ಚಿಕ್ಕ ಪುಸ್ತಕವನ್ನು ಅತ್ಯವಶ್ಯವಾಗಿ ಓದಲೇಬೇಕು. ದ್ವಿತೀಯ ಆಧುನಿಕ ಕರ್ಣರೆಂದೆನ್ನಿಸಿ ಕೊಂಡ, ಈ ಮಹಾತ್ಮನ ಚರಿತ್ರೆಯನ್ನು ಉಂಡು ತಣಿಯಬೇಕು. ನೀನು ಕನ್ನಡ ಭಾಷೆಗೆ ಈ ಗ್ರಂಥದ ಮೂಲಕ ಮಾಡಿದ ಉಪಕಾರವನ್ನು ಯಾವಾಗಲೂ ಕನ್ನಡಿಗರು ಸ್ಮರಿಸಬೇಕು.

ನಿನ್ನ ಪ್ರೀಯ ಅಣ್ಣ,

**ಬೂದಗುಪ್ಪ,** } **ಲಿಂಗನಗೌಡ ದೇವೇಂದ್ರಗೌಡ ಪಾಟೀಲ ಮೆಣಸಿಗಿ,**

೫—೫—೧೯೪೦. } ಬೂದಗುಪ್ಪ ತಾ॥ ಕೊಪ್ಪಳ.

# ವಿಮರ್ಶೆ.



ಹಂಪನಗೌಡಾ ಬಸನಗೌಡಾ ಮಾಲೀಪಾಟೀಲ ಮೈಲಾಪುರ

ಈ ಚಿಕ್ಕ ಪುಸ್ತಕದ ಇಕ್ಕೈಲಗಳನ್ನು ಅಕ್ಕರತೆಯಿಂದ ಓದಿ, ಕುಲು ಕುಲು ನಗಹತ್ತಿದೆನು ಹೃದಯುವು ವಿಧ-ವಿಧವಾದ ಆನಂದತರಂಗಗಳಿಂದ ತುಂಬಿ ತುಳುಕಹತ್ತಿತು. ಎಂಥ ಅಮೃತವಾಣಿ ಇರುವದೀ ಪುಸ್ತಕದಲ್ಲಿ !

ಮುಹಮ್ಮದ ಪೈಗಂಬರರ ಅನುಯಾಯಿಯಾದ ಕೊಪ್ಪಳ ಜಾಗೀರಿಯ ರಾಜಾಗ್ರಣಿಯ ಚರಿತ್ರೆ !! ಗ್ರಂಥಕರ್ತರು ಇತಿಹಾಸ ಸಂಶೋಧಕರಷ್ಟೇ ಅಲ್ಲ ಜ್ಯೋತಿರ್ವಿದ್ಯಾನಿಪುಣರೂ, ಉತ್ತಮ ಸಾಹಿತಿಗಳೂ, ಕವಿತಾ ಶಕ್ತಿವುಳ್ಳವರೂ, ನಾಟಕ, ಪುರಾಣ, ಪುಣ್ಯ-ಕಥೆ, ಜ್ಯೋತಿಷ್ಯಗ್ರಂಥ ಮೊದಲಾದವುಗಳನ್ನು ಬರೆದವರೂ ಇರುತ್ತಾರೆ. ಆದುದರಿಂದ ಈ ಚರಿತ್ರೆಯಲ್ಲಿಯ ಭಾಷೆಯು ವಾಚಕರ ಹೃದಯವನ್ನು ಸ್ವಾಭಾವಿಕವಾಗಿ ಸೆಳೆಯುವದು. ಆಬಾಲವೃದ್ಧರೂ, ಈ ಚಿಕ್ಕ ಚರಿತ್ರೆಯನ್ನು ಸಕ್ಕರೆಯನ್ನು ಸವಿದಂತೆ ಸವಿಯಬಲ್ಲರು.

ತಮ್ಮ,

ಗಂಗಾವತಿ<br>
ತಾ|| ೧೮-೬-೧೯೪೦.

ಹಂಪನಗೌಡ ಬಸನಗೌಡ<br>
ಮಾಲೀಪಾಟೀಲ, ಮೈಲಾಪುರ.<br>
ವಕೀಲ ಗಂಗಾವತಿ.

# ನನ್ನ ಬಯಕೆ.

★

ಕನ್ನಡನಾಡು ನುಡಿಗಳ ಸೇವೆಗಾಗಿ, ತಮ್ಮ ಜೀವನವನ್ನೇ ಮುಡುಪಿಟ್ಟು, ಅನೇಕ ಗ್ರಂಥಗಳನ್ನು ರಚಿಸಿದವರೂ, ಕನ್ನಡದ ಕೀರ್ತಿಯನ್ನು ಬೆಳಿಸುವ ದಕ್ಕೆ ಸಾಹಸಪಟ್ಟು ಕೀರ್ತಿಶಾಲಿಗಳಾದವರೂ, ನಾಲ್ಕಾರು ವರ್ಷಗಳಿಂದ **ಭಾಗ್ಯೋದಯ ಪಂಚಾಂಗ**ವೆಂಬ ಹೆಸರಿನಿಂದ ಪಂಚಾಂಗ ಹೊರಡಿಸಿ, ಹೆಸರುವಾಸಿಗಳೂ ಆದ ಜ್ಯೋತಿರ್ವಿದ್ಯಾಭೂಷಣ ಪಂಡಿತ ಶ್ರೀ ವೀರನ ಗೌಡರು ಪಾಟೀಲ ಮೆಣಶಿಗಿ ಇವರು ಹೊಸ ಅಭ್ಯಾಸಕ್ರಮಕ್ಕನುಸಾರವಾಗಿ ಹೊಸ ಮಾದರಿಯ **ನವಾಬ ಸರ್ ಸಾಲಾರಜಂಗ ಬಹದ್ದೂರ**ರವರ ಇತಿ ಹಾಸವನ್ನು ಬರೆದಿರುವದನ್ನು ಓದಿ ನೋಡಿದೆನು. ಇದು ಸುಲಭವಾಗಿಯೂ ಸುಬೋಧವಾಗಿಯೂ, ರಸಮಯವಾಗಿಯೂ ಇದ್ದು, ಮಕ್ಕಳು ಈ ಕತೆ ಯನ್ನು ಕಿವಿಜೋತು, ಮನಸೋತು ಕೇಳುವಂತೆ ಗುಣಜ್ಞರಾದ ಶಿಕ್ಷಣಾಭಿ ಮಾನಿಗಳ ಮುಂದಿರಿಸಿದ್ದಕ್ಕಾಗಿ ತುಂಬಾ ಆನಂದಭರಿತನಾಗಿರುವೆನು. ಈ ಗ್ರಂಥವು ನಿಜಾಮ ಸರಕಾರದ ಪಠ್ಯಪುಸ್ತಕ ಮಂಡಲದವರ ಮನ್ನಣೆ ಪಡೆ ಯಲೆಂದು ಜಗದೀಶನನ್ನು ಪ್ರಾರ್ಥಿಸುವೆನು.

**ಗದಗ.**
**ತಾ॥ ೪-೧೨-೧೯೪೦.**

**ಕೆ. ರಾ. ಗಣಾಚಾರಿ,**
**ಶಾಲಾಗುರು ಗದಗ.**

# ಮುನ್ನುಡಿ.

ಇದು **ನವಾಬ ಸಾಲಾರಜಂಗ ಬಹದ್ದೂರರವರ** ಮನೆತನದ ಚಿಕ್ಕ ಚರಿತ್ರೆಯು. ೧೭ನೆಯ ಶತಮಾನದಲ್ಲಿ ಈ ಮನೆತನದ (ಪೂರ್ವಜರು) ಮೂಲ ಪುರುಷರು ಮದಿನಾದಿಂದ ಹಿಂದುಸ್ತಾನಕ್ಕೆ ಬಂದರು. ಅಂದಿನಿಂದ ಇಂದಿನ ವರೆಗೂ ಈ ಮನೆತನದ ಚರಿತ್ರೆಯನ್ನು ಪೂರ್ವಭಾವಿಯಾಗಿ ಸಂಕ್ಷಿಪ್ತ ಬರೆದಿರುವೆನು.

ಈ ಚರಿತ್ರೆಯನ್ನು ಬರೆಯಲಿಕ್ಕೆ **ಮೌಲ್ವಿ ಮೀರ ಇಪ್ತೆಖಾರ ಅಲೀ** ಪೇಷಿ. ಇ. ಆಫ್. ಪೋಲಿಸ ಕೊಪ್ಪಳ ಇವರು ಅಪ್ಪಣೆ ಕೊಟ್ಟದ್ದರಿಂದ ಧಾರ್ಮಿಕ ಸೇವೆ, ಭಾಷಾ ಸೇವೆ, ಜನ ಸೇವೆ ಮತ್ತು ಲೋಕ ಸೇವೆ ಮಾಡಿ ಹಿಂದೂ-ಮುಸಲ್ಮಾನರ ಬಂಧುತ್ವವನ್ನು ಬೆಳೆಸುವ ಧ್ಯೇಯದಿಂದ ಈ ಚಿಕ್ಕ ಗ್ರಂಥವನ್ನು ಬರೆದಿರುವೆನು.

ಈ ಗ್ರಂಥವನ್ನು ತಾರೀಖದಕ್ಕನ್ನ, ಮಾಲಗುಜಾರಿ, ದರ್ಬಾರಿ ಆಸಫಿ, ತಾರೀಖ ಬಿಜಾಪುರ ಇತ್ಯಾದಿ ಗ್ರಂಥಗಳ ಆಧಾರದಿಂದಲೂ, ಕೊಪ್ಪಳ ಜಿಲ್ಹೆಯ ವೃದ್ಧ ಜನಗಳ ಮತ್ತು ಅಧಿಕಾರಿಗಳ ಸಹಾಯದಿಂದಲೂ ಬರೆದಿರುವೆನು.

ಈ ಪುಸ್ತಕವನ್ನು ಬರೆದು, ಮುಗಿಸಿದ ತರುವಾಯ ಮಿ॥ **ಎನ್. ಕೆ. ಹಂಪೀಕರ ಮಾಸ್ತರ** ಕೊಪ್ಪಳ ಮತ್ತು **ಮಿ. ಶಾಮೀರಾಸಾಹೇಬ ಖಾದ್ರಿ ಕುಕನೂರ** ಮಾಸ್ತರ ಈ ಉಭಯತರಿಂದ ಕೆಲವು ಮಾಹಿತಿಗಳನ್ನು ಸಂಗ್ರಹಿಸಿಕೊಂಡೆನು. ಇವರು ಸರಳ ಭಾವನೆಯಿಂದ ಕೆಲವು ಸಂಗತಿಗಳನ್ನು ಹೇಳಿ ಕೊಟ್ಟದ್ದರಿಂದ ಅರಿತವರಿಂದ ನುರಿತಂತಾಯಿತು. ಪ್ರಯುಕ್ತ ಈ ಉಭಯತರಿಗೂ ನನ್ನ ಪ್ರಣಾಮಂಗಳನ್ನರ್ಪಿಸುವೆನು.

ಈ ಪುಸ್ತಕಕ್ಕೆ ಬೇಕಾದ ಚಿತ್ರಗಳನ್ನೂ, ಉಳಿದ ಮಹತ್ತರ ವಿಷ ಗಳನ್ನೂ, ಮಿ|| **ಬಹಾವುದ್ದೀನಖಾನ** ಸ. ಇ. ಸಿ. ಆಯ್. ಡಿ. ಕೊಪ್ಪಳ ಇವರಿಂದ ದೊರಕಿಸಿಕೊಂಡೆನು. ಇವರಿಗೆ ಪರಮಾತ್ಮನು ಸುಮಂಗಲವನ್ನೀ ಯಲೆಂದು ಬೇಡಿಕೊಳ್ಳುವೆನು. ಸಕಾಲಕ್ಕೆ ಟೈಪು ಮಾಡಿಕೊಟ್ಟು ನನ್ನ ಶ್ರಮ ಕಡಿಮೆ ಮಾಡಿದ ಮಿ|| **ಜಿಗಳೂರ** ಟಾಯಿಪಿಸ್ಟ, ಗದಗ ಇವರಿಗೆ ನನ್ನ ಪ್ರಣಾಮಂಗಳನ್ನರ್ಪಿಸುವೆನು.

ಈ ಪುಸ್ತಕದ ಪರಿಶೋಧನೆಗಾಗಿ, ನನ್ನ ಪರಮ ಮಿತ್ರರಾದ, **ಶ್ರೀಮಂತ ಮುದಗಲ್ಲ ಪೊಂಪಣ್ಣ ಸಾಹೇಬ** ಕೊಪ್ಪಳ ಇವರು **ಮಿರ್ಜಾ ಸರಫರಾಜ ಅಲೀಸಾಹೇಬ** ಮೊಹತಮಿೂಮ್ ತಾಲೀಮಾತ ಇವರಲ್ಲಿ ಕರೆದುಕೊಂಡುಹೋಗಿ ಅವರಿಂದ ಪರಿಶೋಧನೆಮಾಡಿಸಿ ದಿವ್ಯಸಂದೇಶವನ್ನೇ ಬರಿಸಿಕೊಟ್ಟರು. ಆದುದರಿಂದ, ಈ ಮಹನೀಯರಿಗೆ ನಾನು ತುಂಬಾ ಋಣಿಯಾಗಿರುವೆನು.

ಈ ಪುಸ್ತಕವನ್ನು ಆದಿಯಿಂದ ಅಂತ್ಯದವರೆಗೂ ಓದಿ ತಮ್ಮ ಅಭಿಪ್ರಾ ಯವನ್ನು ಕೊಟ್ಟ **ಮಿರ್ಝಾ ಸರಫರಾಜ ಅಲಿ** ಹೆಡ್‌ಮಾಸ್ತರ ಕೊಪ್ಪಳ, ಮಿ|| ಬಸವಲಿಂಗನಗೌಡರು ಇಟಗಿ, ಮಿ|| ಹಂಪನಗೌಡಾಸಾಹೇಬ ವಕೀಲ ಗಂಗಾವತಿ, ಮಿ|| ಕಲ್ಲಯ್ಯಾ ರಾಚಯ್ಯಾ ಗಣಾಚಾರಿ ಮಾಸ್ತರ ಗದಗ, **ಶ್ರೀಮಂತ ಅಮರಪ್ಪಾ ದೇಸಾಯಿ** ಮುದಗಲ್ಲ ಮೊದಲಾದವರಿಗೆ ತುಂಬಾ ಆಭಾರಿಯಾಗಿರುವೆನು.

ಈ ಪುಸ್ತಕವನ್ನು ಸಕಾಲಕ್ಕೆ ಮುದ್ರಣಮಾಡಿಕೊಟ್ಟ ಕೈ. ವಾ. ಶಿವನಾಗಪ್ಪನವರ "ವಾಗ್ವಿಲಾಸ ಪಾವರ ಪ್ರಿಂಟಿಂಗ ಪ್ರೆಸ್ಸಿನ" ಆಡಳಿತೆ ಗಾರರಾದ **ಶ್ರೀ. ಬಿ. ಪಿ. ಜಕ್ಕನಗೌಡ**ರಿಗೂ ಮತ್ತು ಪ್ರಕಾಶಕರಾದ **ಮಿ|| ಚನ್ನಪ್ಪ ಪರಪ್ಪಾ ಮಾಳಶೆಟ್ಟಿ** ಗದಗ ಇವರಿಗೂ ನನ್ನ ಅಭಿನಂದನೆ ಗಳನ್ನರ್ಪಿಸುವೆನು.

## ಶಿಕ್ಷಣಬಂಧುಗಳಲ್ಲಿ ವಿನಂತಿ.

ಮಾನ್ಯರೇ, ಚಿಕ್ಕಮಕ್ಕಳ ಕೋಮಲ ವಯಸ್ಸಿನಲ್ಲೇ ಕಲಿಸಿಕೊಡ ಹುದಾದ ನಡತೆಯೇ ಮುಂದೆ ನೆಲೆಗೊಂಡು ದೃಢವಾಗುವದೆಂಬ ಕಾರಣ ದಿಂದ ಶಿಕ್ಷಣ ಧ್ಯೇಯವಾದ ಸದ್ವರ್ತನೆಯನ್ನೇ ಶಾಲೆಗಳಲ್ಲಿ ಕಲಿಸಬೇಕೆಂ ಬುವ ನಿಯಮವಿದೆ. ಕೇವಲ ಸೂತ್ರಗಳನ್ನೇ ಪಾಠಮಾಡಿಸಿದಲ್ಲಿ ವಿಚಾ ರವು ಪ್ರಚಾರಕ್ಕೆ ಬರಲಾರದು. ಆದ್ದರಿಂದ ಕಥೆಗಳ ರೂಪದಲ್ಲಿಯೂ ಅದರಲ್ಲೂ ಮಹಾಪುರುಷರ ಜೀವನ ಚರಿತ್ರೆಯಿಂದಲೂ ಇತಿಹಾಸ ಕಾವ್ಯಾದಿಗಳಿಂದಲೂ ಬೇಕಾಗುವ ಕಥಾಭಾಗವನ್ನೆತ್ತಿ ಅದರ ನಿರೂಪಣೆಯಿಂದ ತಾನಾಗಿ ನೀತಿಯು ಹೆಪ್ಪುಗಟ್ಟುವಂತೆ ಮಾಡಬೇಕಾಗಿರುವದೇ ಶಿಕ್ಷಣದ ನಿಯಮವೂ, ಧರ್ಮವೂ, ಆಗಿದೆ. ಅದಕ್ಕಾಗಿ ಮಕ್ಕಳಿಗೆ ತಿಳಿಯುವ ಸರಳ ನುಡಿಗಳಲ್ಲೇ **ನವಾಬ ಸಾಲಾರಜಂಗ ಬಹದ್ದೂರ**ರವರ ಚಿಕ್ಕ ಚರಿತ್ರೆ ಯನ್ನು ಪಾಠ ಪ್ರವಚನಕ್ಕೆ ತಕ್ಕಂತೆ ಬರೆದಿರುತ್ತೇನೆ. ಭಾಷಾ ಜ್ಞಾನದೊ ಡನೆ ಕಥಾರಚನೆ, ಸಂಭಾಷಣೆ, ನಟನೆ, ನಿರೂಪಣೆ, ಇತ್ಯಾದಿಗಳ ಅನುಭವ ಪಡೆಯಲು ಈ ಚರಿತ್ರೆಯು ತುಂಬಾ ಅನುಕೂಲವಾಗಿದೆ. ಯಾವತ್ತೂ ಬಗೆಯ ಶಾಲೆಗಳಲ್ಲಿ ನಿರ್ವಿವಾದವಾಗಿ ಉಪಯೋಗಿಸಲಿಕ್ಕೂ ಬರುತ್ತದೆ. ಪ್ರಜಾಧರ್ಮ ಮತ್ತು ಜೀವನಧರ್ಮವನ್ನೂ ಬೋಧಿಸುವ ಕೈದೀವಟಿಗೆ ಯಾಗಿದೆ. ಕ್ಷಮಾರ್ಹವಾದ ಕೆಲ ದೋಷಗಳು ಗೋಚರವಾದರೂ ಉದಾರಿ ಗಳಾದ ತಾವು ಅವುಗಳನ್ನು ಮರೆತು ಗುಣಗ್ರಾಹಿಗಳಾಗಬೇಕೆಂದು ಪ್ರಾರ್ಥಿ ಸುತ್ತೇನೆ.

## ಈ ಜನ್ಮದ ನೆನಹು.

ಸನ್ ೧೯೩೭ನೆಯ ಇಸ್ವಿಯಲ್ಲಿ ದಾರಿದ್ರ್ಯದೇವತೆಯಿಂದ ಪಾದಾಕ್ರಾಂತ ನಾದ ನನ್ನನ್ನು ಎತ್ತಿ ಹಿಡಿದು ಇಡೀ ಕನ್ನಡ ನಾಡಿನಲ್ಲಿಯೇ ನನ್ನ ಹೆಸರ್ರು ಉಳಿಯುವಂತೆ ಮಾಡಿದ ನನ್ನ ಹಿರಿಯ ಬಂಧುಸಮಾನರಾದ **ಎಸ್.**

**ಎಮ್. ಮುನ್ಷಿ, ಮುನ್ಷಿ ಪ್ರಿಂ. ಪ್ರೈ. ಗದಗ. ಮತ್ತು ವಾಯ್. ಪ್ಹಿಂ. ಜಹಗೀರದಾರ** ರಿ. ಪ್ರಾ. ಶಾಲಾಗುರು ಗದಗ, ಇವರು ನನ್ನಿಂದ ಬರೆಯಲ್ಪಟ್ಟ ಗ್ರಂಥಗಳನ್ನು ಮುದ್ರಣ ಮಾಡಿಕೊಟ್ಟದ್ದಲ್ಲದೆ ಪ್ರತಿವರ್ಷ ಭಾಗ್ಯೋದಯ ಪಂಚಾಂಗವನ್ನು ಅಚ್ಚುಹಾಕಿಕೊಟ್ಟು ಘನತೆಗೆ ತಂದದ್ದರಿಂದ ಪರಮಾತ್ಮನು ಇವರಿಗೆ ಇಹ-ಪರಸುಖಗಳನ್ನೂ, ಅತುಳೈಶ್ವರ್ಯವನ್ನೂ, ಆಯುರಾರೋಗ್ಯವನ್ನೂ ದಯಪಾಲಿಸಲೆಂದು ಜಗತಿಯನ್ನು ಪ್ರಾರ್ಥಿಸುತ್ತೇನೆ.

ತಮ್ಮೆಲ್ಲರ ಚಿರಋಣಿ,<br>
ಜೋತಿರ್ವಿದ್ಯಾಭೂಷಣ ಪಂಡಿತ,<br>
**ಶ್ರೀ. ವೀರನಗೌಡ ಡಿ. ಎಸ್. ಪಾಟೀಲ, ಮಣಸಗಿ.**<br>
ಭಾಗ್ಯೋದಯ ಪಂಚಾಂಗಕರ್ತೃ ಗದಗ-ಸಿಟಿ.

**ಹುಬ್ಬಳ್ಳಿ.**<br>
೨೫-೫-೪೧

# ಈ ಗ್ರಂಥಕರ್ತರು.



ಜ್ಯೋತಿರ್ವಿದ್ಯಾಭೂಷಣ, ಪಂಡಿತ


**ಶ್ರೀ. ವೀರನಗೌಡ, ಡಿ. ಎಸ್. ಪಾಟೀಲ, ಮೊಣಶಿಗಿ.**

ಭಾಗ್ಯೋದಯ ಪಂಚಾಂಗಕರ್ತೃ, **ಗದಗ.**

## ನಿಜಾಮ ಸರಕಾರದ ಮಂತ್ರಿಶ್ರೇಷ್ಠರೂ,
## ಕೊಪ್ಪಳ ಜಾಗೀರಿಯ ನವಾಬರೂ,
## ಆದ

# ಸಾಲಾರಜಂಗ ಬಹದ್ದೂರ

## ಇವರ ಚರಿತ್ರೆ.



ನಮ್ಮ ಪ್ರಭುಗಳಾದ ನವಾಬ ಸರ್ ಸಾಲಾರಜಂಗ ಬಹದ್ದೂರರವರ ಮನೆತನವು ಪ್ರಸಿದ್ಧವಾದ ಮನೆತನವಾಗಿರುವದು. ೧೭ನೆಯ ಶತಮಾನದ ಮಧ್ಯದಲ್ಲಿ ಈ ಮನೆತನದ **ಪೂರ್ವಜರು** (ಮೂಲಪುರುಷರು) **ಮದೀನಾದಿಂದ ಹಿಂದುಸ್ಥಾನಕ್ಕೆ ಬಂದರು.**

ಈ ಮನೆತನದ ಕೀರ್ತಿಶಾಲಿಗಳು ಮೊದಲು ಆದಿಲ್‌ಶಾಹೀ ಪ್ರಭುತ್ವದಲ್ಲಿ, ಆ ಮೇಲೆ ಮೊಗಲ ಸಾಮ್ರಾಟರಲ್ಲಿ, ನಂತರ ನಿಜಾಮ ಪ್ರಭುಗಳಲ್ಲಿ ಅಮಾತ್ಯ (ಪ್ರಧಾನ) ರಾಗಿದ್ದು ರಾಜಪ್ರಜೆಗಳ ಹಿತವೇ ತಮ್ಮ ಹಿತವೆಂದು ತಿಳಿದು ಹಗಲಿರುಳು ದುಡಿದು ಘನಕೀರ್ತಿಶಾಲಿಗಳಾಗಿ ಪ್ರಜೆಗಳನ್ನು ಹೊಟ್ಟೆಯ ಮಕ್ಕಳಂತೆ **ಕಾಪಾಡಿದ ಈ** ಮನೆತನದ ಮಹಾಪುರುಷರು ವಂಶಪರಂಪರವಾಗಿ ಮಂತ್ರಿಪದವನ್ನು ಸ್ವೀಕರಿಸುತ್ತ ಬಂದಿರುವರು.

ಈ ಮನೆತನದಲ್ಲಿ "**ನವಾಬ ಷರ್ಫೋದ್ದೀನ**" ರೆಂಬ ಪ್ರತಾಪಶಾಲಿಗಳು ಏಳುಸಾವಿರ ಕುದುರೆಯ ಸ್ವಾರರ ಮತ್ತು ಏಳುಸಾವಿರ ಕಾಲಾಳುಗಳ ಅಧಿಪತಿಗಳಾಗಿದ್ದರು. **ಇವರೇ ಒಂದನೆಯ ಮುನಿರುಲ್ ಮುಲ್ಕರು**

ಇವರು ಸಾಲಾಬತ್ ಜಂಗ ಬಾದಶಹರ ಕಾಲದಲ್ಲಿ ಹೈದರಾಬಾದದ ಮುಖ್ಯ ಪ್ರಧಾನರಾಗಿದ್ದರು. ಈ ಕೀರ್ತಿಶಾಲಿಗಳ ಮೊಮ್ಮಗನಾದ ಎರಡನೆಯ ಮುನಿರುಲ್‌ಮುಲ್ಕರೆಂಬವರು ಮಹಾಭಗವದ್ಭಕ್ತರೂ, ದಾನಧರ್ಮ ಪರಾಯಣರೂ ಆಗಿಹೋಗಿರುವರು. ಇವರು ಹೈದರಾಬಾದದ ಮುಖ್ಯ ಮಂತ್ರಿಗಳಾದ ಮೀರ ಆಲಂಸೈಯ್ಯದ, ಅಬುಲ್ ಕಾಶೀಮ ಬಹದ್ದೂರರವರ ಮಗಳನ್ನು ಮದುವೆಯಾಗಿದ್ದರು. ಮೀರ ಆಲಂ ಬಹದ್ದೂರರು ನಾಲ್ಕು ವರೆವರ್ಷ ಮುಖ್ಯ ಮಂತ್ರಿಗಳಾಗಿದ್ದು ಮೃತಪಟ್ಟ ನಂತರ ಎರಡನೆಯ ಮುನಿರುಲ್ ಮುಲ್ಕರೇ ಮಂತ್ರಿಪದ ಸ್ವೀಕರಿಸಿ ೨೩ ವರ್ಷ ಆರು ತಿಂಗಳು ಹೈದರಾಬಾದ ಸಂಸ್ಥಾನದ ಸೇವೆ ಮಾಡಿರುವರು. ಕೊಪ್ಪಳದ ಗವಿಮಠಕ್ಕೆ ಹಿರೇಬಗ್ಗನಾಳ ಗ್ರಾಮವನ್ನು (ಖರಾಯೇ ಸದಾಬರತ ಖೈರಾತ) ಇನಾಮಾಗಿ ಕೊಟ್ಟ ದಾನಶೂರರೇ ಮೀರ ಆಲಂ ಬಹದ್ದೂರರು.

"ಎರಡನೆಯ ಮುನಿರುಲ್ ಮುಲ್ಕ" ಬಹದ್ದೂರರು ತಮ್ಮ ಮೊಮ್ಮಗನಾದ ಸಾಲಾರಜಂಗ ಬಹದ್ದೂರರವರಿಗೆ ಮೂರುವರ್ಷದ ವಯಸ್ಸಿನಲ್ಲಿ ಮರಣಕ್ಕೆ ಸಮಾನವಾದ ದೊಡ್ಡ ಕಾಯಿಲೆ ಬಂದಿರಲು ದೇವರನ್ನು ಪ್ರಾರ್ಥಿಸಿ ನನ್ನ ಮೊಮ್ಮಗನ ಬೇನೆಯೇ ನನಗೆ ಬಂದು ಬಾಲಕನಿಗೆ ಗುಣವಾಗಲೆಂದು ಪ್ರಾರ್ಥಿಸಲು ಕೂಸಿಗೆ ಗುಣಮುಖವಾಗಿ ಕೂಸಿನ ಬೇನೆಯೇ ಮುನಿರುಲ್ ಮುಲ್ಕರಿಗೆ ಬಂದು ಮೃತಪಟ್ಟರು.

೨ನೆಯ ಮುನಿರುಲ್ ಮುಲ್ಕರಿಗೆ ಇಬ್ಬರು ಗಂಡು ಮಕ್ಕಳಾಗಿದ್ದರು. ಹಿರಿಯ ಮಕ್ಕಳ ಹೆಸರು ಷಿಜಾ-ಉದ್ದೌಲಾ ನವಾಬ ಮೀರಮುಹಮ್ಮದ ಅಲಿಖಾನ ಬಹಾದ್ದೂರನ ಕಿರಿಯ ಮಕ್ಕಳ ಹೆಸರು. ಸಿರಾಜುಲ್‌ಮುಲ್ಕ ಷಿಜಾ-ಉದ್ದೌಲಾಬಹದ್ದೂರ ಇವರು ಸೈಯ್ಯದ ಕಾಶೀಮ ಅಲಿಖಾಂ ಮುಖ್ತ್ಯಾರುದ್ದೌಲಾನ ಪುತ್ರಿಯ ವಿವಾಹವಾಗಿದ್ದರು. ಈ ದಂಪತಿಗಳ ಉದರದಲ್ಲಿ ಮೀರ ತುರಾಬ ಅಲೀಖಾನ ಬಹದ್ದೂರರವರು ಹುಟ್ಟಿದರು. ಇವರೇ ಸರ್ ಸಾಲಾರಜಂಗ ಬಹದ್ದೂರರೆಂದು ಅಭಿಧಾನ ಪಡೆದವರು. ಇವರು ತಾರೀಖು ೨೯ ಜನವರಿ ೧೮೨೯ ನೆಯ ಇಸ್ವಿಯ ದಿವಸ ಜನಿಸಿದರು.

ಮಿೀರ ತುರಾಬ ಅಲೀಖಾನ ಬಹದ್ದೂರರವರ ಬಾಲ್ಯದಲ್ಲಿಯೆ ತಂದೆಯವರೂ ಅಜ್ಜಂದಿರೂ ಮೃತಪಟ್ಟರು. ಮಿೀರ ತುರಾಬ ಅಲೀಖಾನ ಬಹದ್ದೂರರವರ ಸಂರಕ್ಷಣೆಯ ಭಾರವು ಕಕ್ಕಂದಿರಾದ ಸಿರಾಜುಲ್ ಮುಲ್ಕರ ಮೇಲೆಯೇ ಬಿತ್ತು. ಆದರೂ ತುರಾಬ ಅಲೀಖಾನ ಬಹಾದ್ದೂರರ ಅಜ್ಜಿಯವರು ಲೆಕ್ಕ-ಪತ್ರಗಳಲ್ಲಿ ಪ್ರವೀಣರೂ ರಾಜಕಾರಣ ಪಟುಗಳೂ, ಜಾಣರೂ ಇದ್ದದರಿಂದ ತುರಾಬ ಅಲೀಖಾನ ಬಹದ್ದೂರರನ್ನು ಘನತೆಗೆ ತಂದವರೆಂದರೆ ಅವರ ಅಜ್ಜಿಯವರೆಂದೇ ಹೇಳಬಹುದು. ಇಂಥ ಸುಶಿಕ್ಷಿತ ಅಜ್ಜಿಯವರ ನೇತೃತ್ವದಲ್ಲಿ ಇವರ ವಿದ್ಯಾಭ್ಯಾಸವು ವಯಸ್ಸಿನ ಏಳನೆಯ ವರುಷದಲ್ಲಿ ಪ್ರಾರಂಭವಾಗಿ ಹದಿಮೂರನೆಯ ವರ್ಷದೊಳಗಾಗಿ ಫಾರಸಿ-ಅರಬ್ಬಿ ಭಾಷೆಗಳನ್ನು ಚನ್ನಾಗಿ ಕಲಿತರು. ಲೆಕ್ಕ-ಪತ್ರಗಳ ವಿಷಯವಾಗಿ, ಅಜ್ಜಿಯವರೇ ಶಿಕ್ಷಣ ಕೊಡುತ್ತಿದ್ದರು.

ಮುಸಿರುಲ್ ಮುಲ್ಕರ ತರುವಾಯ, ಹನ್ನೊಂದು ವರ್ಷಗಳ ಮೇಲೆ ಸಿರಾಜುಲ್ ಮುಲ್ಕರವರು. ಮಂತ್ರಿಪದ ಸ್ವೀಕಾರ ಮಾಡಿದರು. ಆಗ ಸಿರಾಜುಲ್ ಮುಲ್ಕರ ಜಾಗೀರಿಯ ಮೇಲ್ವಿಚಾರಣೆಯನ್ನು ತುರಾಬ ಅಲೀಖಾನ ಬಹಾದ್ದೂರರವರ ಅಜ್ಜಿಯವರೇ ಮಾಡಹತ್ತಿದರು. ಕೈಕೆಳಗಿನ ಅಧಿಕಾರಿಗಳು, ಲೆಕ್ಕ-ಪತ್ರಗಳನ್ನು ಒಪ್ಪಿಸುವಾಗ ಹೌಹಾರಿ ಹೋಗುತ್ತಿದ್ದರು. ತುರಾಬ ಅಲೀಖಾನ ಬಹದ್ದೂರರಿಗೆ ಸತ್ಯ, ದಯೆ, ಧರ್ಮ, ಸಾಹಸ, ಶೌರ್ಯ ಧೈರ್ಯಾದಿಗಳ ಮೇಲೆ ಅಜ್ಜಿಯವರೇ ಮೇಲ್ತರದ ಶಿಕ್ಷಣವನ್ನು ಕೊಟ್ಟದ್ದರಿಂದ ತುರಾಬ ಅಲೀಖಾನ ಬಹಾದ್ದೂರರಿಗೆ ಅಸಾಧಾರಣ ಕೆಲಸಗಳನ್ನು ಮಾಡಿ ಸೂರ್ಯ-ಚಂದ್ರರಿರುವ ವರೆಗೆ ತಮ್ಮ ಮನೆತನದ ಕೀರ್ತಿಪತಾಕಿಯು ಹಾರಾಡುವಂತೆ ಮಾಡಲು ಹಗುರಾಯಿತೆಂದೇ ಹೇಳಬಹುದು. ತುರಾಬ ಅಲೀಖಾನ ಬಹದ್ದೂರರು ಖೊಟ್ಟಿ ಕುದುರೆಗಳನ್ನು ಹತ್ತಿ ದಣಿಸಿ ಅವನ್ನು ನೀರು ನೀರಾಗಿ ಮಾಡುವದು ವ್ಯಾಯಾಮ ಮಾಡುವದು, ಭಾಲೆ ತಿರುವುವದು, ಈಸುವದು ಗುರಿಹೊಡೆಯುವದು. ಚನ್ನಾಗಿ ಅರಿತುಕೊಂಡಿದ್ದರು. ತುರಾಬ ಅಲಿಖಾನ ಬಹದ್ದೂರರು ಇಂಗ್ಲಿಷ

**ಅಭ್ಯಾಸಮಾಡಿ ತೇರ್ಗಡೆ ಹೊಂದಿದರು. ಇವರ ಇಂಗ್ಲಿಷ ಭಾಷಣವನ್ನು ಕೇಳಿ ಆಂಗ್ಲ ಅಧಿಕಾರಿಗಳು ಬೆರಳು ಕಚ್ಚುತ್ತಿದ್ದರು.**

ಮೀರ ತುರಾಬ ಅಲೀಖಾನರಿಗೆ ವಯಸ್ಸಿನ ೧೮ನೆಯ ವರ್ಷದಲ್ಲಿಯೇ ತೆಲಂಗಾಣದಲ್ಲಿ ತಾಲೂಕದಾರರ (ಕಲೆಕ್ಟರರ) ಹುದ್ದೆ ದೊರೆಯಿತು. ಆ ಸ್ಥಳದಲ್ಲಿ "ಡ್ರೈಟಿನ್" ಎಂಬ ಆಂಗ್ಲ ಅಧಿಕಾರಿ ಇದ್ದನು. ಮೀರ ತುರಾಬ ಅಲೀಖಾನರು ವಯಸ್ಸಿನಿಂದ ಚಿಕ್ಕವರಾಗಿದ್ದರೂ ಆ ಕೆಲಸದಲ್ಲಿ ಲೋಕಪ್ರಿಯರಾಗಿ ಪ್ರಖ್ಯಾತರಾದರು. ಆದರೆ ಇವರು ಬಹಳ ದಿನಗಳವರೆಗೆ ಆ ಸ್ಥಳದಲ್ಲಿ ಇರಲಿಲ್ಲ. ತುರಾಬ ಅಲೀಖಾನರ ಕಕ್ಕಂದಿರಾದ ಸಿರಾಜುಲ್‌ಮುಲ್ಕರು ತುರಾಬ ಅಲೀಖಾನರನ್ನು ಕರೆಯಿಸಿಕೊಂಡು ತಮ್ಮ ಜಾಗೀರಿಯ ಮೇಲ್ವಿಚಾರಣೆಯ ಕೆಲಸವನ್ನು ತುರಾಬ ಅಲೀಖಾನರಿಗೆ ಒಪ್ಪಿಸಿದರು. ತುರಾಬ ಅಲೀಖಾನರು ಐದುವರ್ಷ ತಮ್ಮ ಜಾಗೀರಿಯ ಆಡಳಿತೆಯ ಸೂತ್ರವನ್ನು ಕೈಯಲ್ಲಿ ತಕ್ಕೊಂಡು ಅನೇಕ ಸುಧಾರಣೆಗಳನ್ನು ಮಾಡಿ ಜಾಗೀರಿಯ ಉತ್ಪನ್ನವನ್ನು ಹೆಚ್ಚಿಸಿದರು. ಮೀರ ತುರಾಬ ಅಲೀಖಾನರ ಕೆಲಸವನ್ನು ನೋಡಿ ಆನಂದ ಪಡುತ್ತಿದ್ದ ಕಕ್ಕಂದಿರು ನಾಲ್ಕುವರ್ಷ ಮಂತ್ರಿಗಳಾಗಿದ್ದು ಸನ್ ೧೮೫೩ನೆಯ ಇಸ್ವಿಯಲ್ಲಿ ಮೃತಪಟ್ಟರು.

ಸಿರಾಜುಲ್ ಮುಲ್ಕರ ತರುವಾಯ ಹೈದರಾಬಾದ ಸಂಸ್ಥಾನದ ಅಮಾತ್ಯಪದವು ಅಕಸ್ಮಾತ್ತಾಗಿ ಮೀರ ತುರಾಬ ಅಲೀಖಾನರ ಉಡಿಯಲ್ಲಿ ಬಿತ್ತು. ಆಗಿನ ಬಾದಶಹರಾದ ನವಾಬ ನಾಸಿರುದ್ದೌಲಾ ಮೀರ ಫರಖುದಾ ಅಲೀಖಾನ್ ನಾಲ್ಕನೆಯ ಆಸಫ್ ಜಹಾಂವರು ಸನ್ ೧೮೫೩ನೆಯ ಇಸ್ವಿ ಮೇ ತಿಂಗಳದ ೩೧ನೆಯ ತಾರೀಖಿನ ದಿವಸ ಅಪೂರ್ವವಾದ ದರ್ಬಾರವನ್ನು ನೆರೆಯಿಸಿ ಮೀರ ತುರಾಬ ಅಲೀಖಾನರವರಿಗೆ "**ನವಾಬ ಸಾಲಾರಜಂಗ ಬಹದ್ದೂರ**" ಸಿರಾಜುದ್ದೌಲಾ ಮುಖ್ತ್ಯಾರಮುಲ್ಕ ಎಂಬ ಬಿರುದುಗಳನ್ನೂ ಬಹು ಬೆಲೆಯ ಉಡುಗರೆಯನ್ನೂ ಚಿಲಕತ್ತನ್ನೂ ಕೊಟ್ಟು ಗೌರವಿಸಿ ಹೈದರಾಬಾದ ಸಂಸ್ಥಾನದ ಮಂತ್ರಿ ಪದವನ್ನು ಒಪ್ಪಿಸಿದರು.

ನವಾಬ ಸಾಲಾರಜಂಗ ಬಹದ್ದೂರರವರು ಮಂತ್ರಿಪದ ಸ್ವೀಕಾರ **ಮಾಡಿದರೂ ಹೆಚ್ಚಿನ ಅಧಿಕಾರ ಇವರಿಗಿದ್ದಿಲ್ಲ. ರೋಹಲೆ, ಪಠಾಣ, ತುರ್ಕಿ**

ಮೊದಲಾದ ಫುಂಡರ ಹಾವಳಿಯಿಂದ ಸಿಕ್ಕ ಸಿಕ್ಕವರು ಭೂಕಂದಾಯವನ್ನು ಎತ್ತಿಹಾಕುತ್ತಿದ್ದರು. ಲೆಕ್ಕಪತ್ರಗಳಂತೂ ಇರಲೇ ಇಲ್ಲ. ಯಾವಾಗಲೂ ರಾಜಬೊಕ್ಕಸವು ಬರಿದಾಗಿಯೇ ಇರುತ್ತಿತ್ತು.

**ಬಿರಾರ, ರಾಯಚೂರ, ನಲದುರ್ಗಗಳು** ಈಸ್ಟ ಇಂಡಿಯಾ ಕಂಪನಿಯವರ ಪಾಲಾಗಿ ಹೋಗಿದ್ದವು. ಅರಸು ಮಕ್ಕಳಿಗೆ ಸಲ್ಲತಕ್ಕ ಹಣವೂ ಸರಿಯಾಗಿ ಸಲ್ಲುತ್ತಿರಲಿಲ್ಲ. ಇಂಥ ಅವ್ಯವಸ್ಥೆಯ ಸಮಯದಲ್ಲಿ ವಿಶ್ವ ಪ್ರಯತ್ನಪಟ್ಟು ಹಿಂದುಳಿದ ಸಂಸ್ಥಾನವನ್ನು ಮುಂದೆ ತಂದು ಘನಕೀರ್ತಿ ಸಂಪಾದಿಸಿದ ಮಹಾನುಭಾವರೇ ಸಾಲಾರಜಂಗ ಬಹಾದ್ದೂರರು.

ಇವರು ಕುಶಲರೂ ಅಸಾಧಾರಣ ಮೇಧಾವಿಗಳೂ ರಾಜಕಾರಣ ಪಟುಗಳೂ ಆಗಿದ್ದು ರಾಜ್ಯವೆಂಬ ರಥವು ಸುಸೂತ್ರವಾಗಿ ಸಾಗಬೇಕಾದರೆ, ರಥದ ಗಾಲಿಗಳಾದ ರಾಜ-ಪ್ರಜರು ಸುಖವಾಗಿರಬೇಕೆನ್ನುವದೇ ಇವರ ಗುರಿಯಾಗಿತ್ತು. ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ಬಲ್ಲವರಿದ್ದು ಅವಿಶ್ವಾಸ, ಸುಳ್ಳು, ಚಾಡಿ, ಲಂಚಗೂಳಿತನ ಇವರಿಗೆ ಸೇರುತ್ತಿರಲಿಲ್ಲ. ಒಮ್ಮೆ ವಚನ ಕೊಟ್ಟರೆ, ತಮ್ಮ ಪ್ರಾಣಹೋದರೂ ಪಾಲಿಸುವದು ಬಿಡಲಿಲ್ಲ. ಸತ್ಯದಿಂದಲೂ ನಿರ್ದಾಕ್ಷಿಣ್ಯದಿಂದಲೂ ಪರಮಾತ್ಮನಲ್ಲಿ ವಿಶ್ವಾಸವಿಟ್ಟು ರಾಜ್ಯ ಸೂತ್ರವನ್ನು ಸರಸವಾಗಿ ನಡೆಯಿಸುತ್ತಿದ್ದರು.

ನಿಷ್ಪಕ್ಷಪಾತಿಗಳಿಗೆ ಯಾವಾಗಲೂ (ಅಪಾದನೆ) ಕುಂದು ಕೊರತೆಗಳು ಇದ್ದೇ ಇರುವವೆಂಬ ನಾಣ್ಣುಡಿಯಂತೆ ಆ ಕಾಲದಲ್ಲಿ **ಲಾಲಬಹದ್ದೂರನೆಂಬ** ಅಧಿಕಾರಿಯು ಮುಖಸ್ತೋತ್ರ ಮಾಡಿ ಇಲ್ಲದ್ದೊಂದು ಹೇಳಿ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದನು. ಚಾಡಿ, ಸುಳ್ಳು ಹೇಳುವದೆಂದರೆ ಅವನ ಆದ್ಯ ಕರ್ತವ್ಯವಾಗಿತ್ತು. ಅವನದೊಂದು ಪುಂಡರ ಗುಂಪು ಬಾದಶಹರ ಮೇಲೂ ತಮ್ಮ ವರ್ಚಸ್ಸು ಇಟ್ಟುಕೊಂಡದ್ದರಿಂದ ಲಾಲನ ವಿರುದ್ಧ ಹೋದವರ ಗತಿಯೇ ನೆಟ್ಟಗಾಗುತ್ತಿದ್ದಿಲ್ಲ. ಸಾಹುಕಾರರು, ಸಂಭಾವಿತರು ತಮ್ಮ ಮಾನಕ್ಕೆ ಅಂಜಿ ಲಾಲನು ಪೂರ್ವಕ್ಕೆ ಪಶ್ಚಿಮವೆಂದರೂ ತಲೆಹಾಕುತ್ತಿದ್ದರು.

ಒಂದಾನೊಂದು ದಿವಸ ಲಾಲನು ಕೆಲವು ಕಾಗದಗಳನ್ನು ತಂದು ನವಾಬ ಸಾಲಾರಜಂಗ ಬಹದ್ದೂರರವರಲ್ಲಿ ಬಂದು ಸಹಿಮಾಡಲಿಕ್ಕೆ ಒತ್ತಾಯ ಮಾಡಿದನು. ಆ ಮಾತಿಗೆ ಸಾಲಾರಜಂಗ ಬಹದ್ದೂರರು ನಿರಾಕರಿಸಿದ್ದರಿಂದ ಲಾಲನು ಸಾಲಾರಜಂಗರಿಗೆ ಅನೇಕ ಕುತಂತ್ರಗಳಿಂದ ಕಾಡತೊಡಗಿದನು. "**ಸತ್ಯಮೇವೋದ್ಧರಾಮ್ಯಹಂ**" ಎಂಬಂತೆ, ಸತ್ಯವಂತರಾದ ಸಾಲಾರಜಂಗರವರು, ಸಂಸ್ಥಾನದ ಸುಧಾರಣೆಗಾಗಿ ಹಗಲಿರುಳು ದುಡಿದುಡಿದು ಪುಂಡರ ಹಾವಳಿಯನ್ನು ನಿಲ್ಲಿಸಿ ಬೊಕ್ಕಸಕ್ಕೆ ಭಾರವಾಗಿದ್ದ ನಾಲ್ಕು ಸಾವಿರ ಸೈನ್ಯವನ್ನು ಕಿತ್ತೊಗೆದು ಧನವಂತರ ಸ್ವಾಧೀನಗಳಲ್ಲಿದ್ದ ನವರತ್ನಗಳ ಒಡವೆಗಳನ್ನೂ ಭೂಮಿಗಳನ್ನೂ ಬಿಡಿಸಿಕೊಂಡು ಭೂಕಂದಾಯದ ವಸೂಲಿಯ ಕ್ರಮವನ್ನು ಸುಧಾರಣೆಯಲ್ಲಿ ತಂದು, ಭೂಮಿಯ ಸರ್ವೇ ಮಾಡಿಸಿ ಭೂಕಂದಾಯ ಇಷ್ಟೇ ಕೊಡಬೇಕೆಂದು ನಿರ್ಣಯಿಸಿ ಧಾನ್ಯರೂಪವಾಗಿ (ಹುಗ್ಗೀ ಜೋಳವೆಂಬದಾಗಿ) ಕೊಡುತ್ತಿದ್ದ ಭೂ ಕಂದಾಯವನ್ನು ದ್ರವ್ಯರೂಪವಾಗಿ ಕೊಡುವಂತೆ ಆಜ್ಞಾಪಿಸಿದರು. ತೆರಿಗೆಯ ಗುತ್ತೇದಾರರಿಂದ ಪ್ರಜೆಗಳಿಗಾಗುತ್ತಿದ್ದ ಯಾತನೆಗಳು ದೂರಾಗಿ ಕಂದಾಯ ಅಧಿಕಾರಿಗಳ ಮುಖಾಂತರ ಹಪ್ತೇ ವಸೂಲಾಗಿ ರಾಜಭಾಂಡಾರಕ್ಕೆ ಜಮೆಯಾಗುವ ಪದ್ಧತಿಯು ಪ್ರಜೆಗಳಿಗೆ ಸುಖಮಯವಾಯಿತು. ಯಾವಾಗಲೂ ಬರಿದಾಗಿರುತ್ತಿದ್ದ ಬೊಕ್ಕಸವು ಹಣಕಾಣಹತ್ತಿತು. ಸರಕಾರಕ್ಕಿದ್ದ ಸಾಲವು ತೀರಿಹೋಯಿತು.

ಇಷ್ಟಾದರೂ ನವಾಬ ಸಾಲಾರಜಂಗ ಬಹದ್ದೂರರವರಿಗೆ ಸುಖವೇ ಇರಲಿಲ್ಲ. ಯಾಕಂದರೆ ಲಾಲನು ಇವರ ವಿಷಯವಾಗಿ ಇಲ್ಲದ್ದೊಂದು ವಿಪರೀತ ದೂರುಗಳನ್ನು ಬಾದಶಹರಿಗೆ ಹೇಳುತ್ತಿದ್ದನು. ಅವನ ಸಂಗಡಿಗರಾದ ಪುಂಡರು ಅವನಂತೇ ತಲೆಹಾಕುತ್ತಿದ್ದರು. ರೋಹಲೇ, ಅರಬ್ಬೀ, ಅಮೀರ, ಉಮರಾಜರಿಗೆ ಅನ್ಯಾಯವಾಗಿರುವದೆಂದು ನಾನಾವಿಧವಾದ ಆರೋಪಗಳನ್ನು ಸಾಲಾರಜಂಗರವರ ತಲೆಯಮೇಲೆ ಹೊರಿಸಿದರು

ಹೈದರಾಬಾದ ಸಂಸ್ಥಾನದ ಸೇವೆಗಾಗಿ ಶೀಲವಾಗಿಟ್ಟ ಸಾಲಾರಜಂಗರವರ ಇಂಗಿತವನ್ನರಿಯದೆ ಬಾದಶಹರು ಲಾಲನ ಕುತಂತ್ರಗಳ ಪರಿಣಾಮ

ದಿಂದ ದಿನದಿನಕ್ಕೆ ಸಾಲಾರಜಂಗರಲ್ಲಿ ವಿಶ್ವಾಸವನ್ನು ಕಡಿಮೆಮಾಡಹತ್ತಿದರು. ಇಂಥ ವಿಷಮ ವಾತಾವರಣ ಪ್ರಬಲವಾಗುತ್ತಿರುವಾಗ **ನಾಸಿರುದ್ದೌಲಾ ಬಾದಶಹರು ಪರಲೋಕವಾಸಿಗಳಾದರು.**

ಇವರು ೨೮ ವರ್ಷ ಹತ್ತು ತಿಂಗಳು ರಾಜ್ಯವನ್ನಾಳಿ ತಮ್ಮ ೬೫ನೆಯ ವರ್ಷದಲ್ಲಿ ಅಂದರೆ ತಾ ೧೮ ಮೇ ೧೮೫೭ನೇ ಇಸ್ವಿಯಲ್ಲಿ ಮೃತಪಟ್ಟರು. ತರುವಾಯ ಇವರ ಸತ್ಪುತ್ರರಾದ ನವಾಬ ಅಫಜುಲ್ ಉದ್ದೌಲಾ ಮೀರತಹನಿಯತೇ ಅಲೀಖಾನ ೫ನೆಯ ಆಸಫ್‌ಜಹಾರರವರು ಸಿಂಹಾಸನವನ್ನೇರಿದರು.

ಹೊಸ ಬಾದಶಹರ ಕಾಲದಲ್ಲಿ ಸಾಲಾರಜಂಗರ ಸುಧಾರಣೆಗಳೆಂದರೆ ಬಾದಶಹರಿಗೆ ಸೇರದಂತಾಯಿತು. ಇದರ ಪರಿಣಾಮವಾಗಿ ಪ್ರಾಮಾಣಿಕ ಪ್ರಜೆಗಳಿಗೆ ಸುಖವಾಗಿ ಬಾಳ್ವೆಮಾಡುವದು ಕಠಿಣವಾಗಿತ್ತು.

ಸಂಸ್ಥಾನದ ಸುಧಾರಣೆಗೆ ಕುಂದು ಕೊರತೆಗಳೂ, ಅಡ್ಡಿ ಆತಂಕಗಳೂ, ಬರುತ್ತಿರುವದರಿಂದ ನವಾಬ ಸಾಲಾರ ಜಂಗರವರು ಒಮ್ಮೊಮ್ಮೆ ಮರುಗುತ್ತಿದ್ದರು. ಮತ್ತೊಮ್ಮೆ ನಿರುತ್ಸಾಹದಿಂದ ನಿಟ್ಟುಸುರುಬಿಟ್ಟು ಸಮಾಧಾನ ಮಾಡಿಕೊಳ್ಳುತ್ತಿದ್ದರು. ಇಂಥ ದುಃಸ್ಥಿತಿಯ ಬೇಗೆಯಿಂದ ಸಾಲಾರ ಜಂಗರವರಿಗೆ ಅಮಾತ್ಯಪದವೇ ಸಾಕು ಸಾಕಾಗಿ ಎರಡುಸಲ ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟರು. ರೆಸಿಡೆಂಟರು ರಾಜೀನಾಮೆಗಳನ್ನು ಮಂಜೂರ ಮಾಡದೆ ಪ್ರಧಾನಪದವಿಯನ್ನು ಸಾಲಾರಜಂಗರ ಉಡಿಯಲ್ಲಿಯೇ ಹಾಕಿಸಿದರು. ಆದುದರಿಂದ ತಾವು ಮಾಡಬಯಸಿದ್ದನ್ನು ಕಾರ್ಯರಂಗಕ್ಕೆ ತಂದೇ ತೀರಬೇಕೆಂದು ನಿರ್ಧರಿಸಿದರು. ಅನುಮಾನ ಅಸಮಾಧಾನಗಳ ಸುಳಿಗಾಳಿಯನ್ನು ತಮ್ಮ ಎಡಬಲಕ್ಕೆ ಹಾಯದಂತೆ ವ್ಯವಸ್ಥೆಯನ್ನಿಟ್ಟರು.

ಇದೇ ಸಂದರ್ಭದಲ್ಲಿ ಸಿಪಾಯಿದಂಗೆ ಎಂಬ ಕಾಡ್ಗಿಚ್ಚು ಉತ್ತರ ಹಿಂದುಸ್ತಾನದಲ್ಲಿ ಎದ್ದು ನೋಡುವಷ್ಟರಲ್ಲಿ ಇಡೀ ಹಿಂದುಸ್ತಾನವೆಲ್ಲಾ ಹಬ್ಬಿತು. ಈ ದಂಗೆಗೆ ೧೮೫೭ನೆಯ ಇಸ್ವಿಯ ಬಂಡಾಯವೆನ್ನುವರು.

ಈ ದಂಗೆಯ ಮುಖ್ಯ ಉದ್ದೇಶವು ಬ್ರಿಟಿಶರನ್ನು ಹಿಂದುಸ್ತಾನದಿಂದ ಹೊರಗೆ ತಳ್ಳಿಬಿಡುವದೇ ಆಗಿತ್ತು. ಇದರಲ್ಲಿ ಜನಸಾಮಾನ್ಯರು ಮೊದಲು ಮಾಡಿಕೊಂಡು ನವಾಬರೂ ರಾಜರೂ ಕೂಡಿದ್ದರು. ಕೆಲವರು ತಮ್ಮ ಸ್ವಾತಂತ್ರ್ಯವೇ ಹರಣವಾಯಿತೆಂದೂ, ಹಲವರು ಇಂಗ್ಲಿಷರಿಂದ ಜಾತಿಧರ್ಮ ಕೆಟ್ಟುಹೋಯಿತೆಂದೂ ಮುಖ್ಯಸ್ಥರು ತಮ್ಮ ರಾಜ್ಯವನ್ನೇ ಇಂಗ್ಲಿಷರು ಎತ್ತಿಹಾಕಿದರೆಂದೂ ಅನ್ನಹತ್ತಿದರು. ಎತ್ತ ನೋಡಿದತ್ತ ಇಂಗ್ಲಿಷರ ಮೇಲೆ ಖಡ್ಗಧಾರಿಗಳಾದ ಬಂಡುಖೋರರೇ ಕಾಣಹತ್ತಿದರು. ಮೊಗಲ ಚಕ್ರವರ್ತಿ ವಂಶಜನೂ, ನಾನಾಸಾಹೇಬನೂ, ಅಯೋಧ್ಯಾ ನವಾಬನೂ, ಝಾಂಸಿ ಮಹಾರಾಣಿಯೂ ಈ ದಂಗೆಯಲ್ಲಿ ಕೂಡಿದ್ದರು. ಕೊಪ್ಪಳ, ಕಿತ್ತೂರ ನರಗುಂದ ಬಂಡಾಯಗಳು ಇದೇ ಕಾಲದಲ್ಲಿಯೇ ಆದವು.

ಹೈದರಾಬಾದದಲ್ಲಂತೂ ಈ ದಂಗೆಯ ಪರಿಣಾಮವು ಭಯಂಕರವಾಯಿತು. ಅಲ್ಲಿಯ ಮುಸಲ್ಮಾನರು ಇಂಗ್ಲಿಷರ ವಿರುದ್ಧ ಖಡ್ಗವನ್ನೆತ್ತಿದರು. ಧರ್ಮದ ಯುದ್ಧವೆಂದೇ ಭಾವಿಸಿದರು. ಹೈದರಾಬಾದದಲ್ಲಿ ಎಲ್ಲಿ ನೋಡಿದರೂ ಅಲ್ಲಿ ದೀನ್ ದೀನ್, ಎಂಬ ಕೂಗು ಕೇಳಬರಹತ್ತಿತು. ಬೀದಿಗಳಲ್ಲಿ ತಂಡ ತಂಡವಾಗಿ ರೋಹಲೇ, ಪಠಾಣ, ಅರಬ ಮೊದಲಾದವರು ಕೂಗುತ್ತ ತಿರುಗಾಡಹತ್ತಿ ಜನರನ್ನು ರೊಚ್ಚಿಗೆಬ್ಬಿಸಿದರು. ರೊಚ್ಚಿಗೆದ್ದ ಕೆಲ ಜನ ಪುಂಡರಂತೂ ರೆಸಿಡೆಂಟರ ಬಂಗ್ಲೆಯನ್ನೇ ಮುತ್ತಲು ಧಾವಿಸಿದರು.

ಬ್ರಿಟಿಷರು ಗಾಬರಿಯಿಂದ ಹೌಹಾರಿ ಹೋದರು. ಒಂದೊಂದೇ ಪಟ್ಟಣಗಳು ಅವರ ಕೈಬಿಡಹತ್ತಿದವು. ದಿಲ್ಲಿ, ಲಖನೌ, ಕಾನಪೂರ ಮೊದಲಾದವುಗಳು ದಂಗೆಯವರ ವಶವಾಗಿ ಹೋದವು. ಹೈದರಾಬಾದದ ಮೇಲೆಯೇ ಬ್ರಿಟಿಶರ ಏಳು-ಬೀಳು ಅವಲಂಬಿಸಿತ್ತು. ಆಗಿನ ಕಾಲದಲ್ಲಿ ಸರ್ ಸಾಲಾರಜಂಗರು ಸಹಾಯ ಮಾಡದೆ ಸುಮ್ಮನೇ ಕುಳಿತಿದ್ದರೆ ಇಂದು ಹಿಂದುಸ್ತಾನದ ಇತಿಹಾಸವೇ ಬೇರೆಯಾಗುತ್ತಿತ್ತು.

ಆದರೆ ಸರ್ ಸಾಲಾರಜಂಗರು ಬ್ರಿಟಿಷರಿಗೆ ಕೊಟ್ಟ ವಚನವನ್ನು ತಮ್ಮ ಪ್ರಾಣದ ಪರಿವೆ ಇಲ್ಲದೆ ಪಾಲಿಸಿದರು. ದಂಗೆಗೆ ಪ್ರೋತ್ಸಾಹಿಸುತ್ತಿರು

ವವರನ್ನು ಕೈಸೆರೆ ಮಾಡಿದರು. ಜನರನ್ನು ರೊಚ್ಚಿಗೆಬ್ಬಿಸುವಂಥ ಭಾಷಣ ಗಳನ್ನು ಮಾಡುವವರನ್ನು ಶಿಕ್ಷೆಗೆ ಗುರಿಮಾಡಿದರು. ತಂಡ ತಂಡವಾಗಿ ಆಯುಧಗಳನ್ನು ಹಿಡಿದುಕೊಂಡು ತಿರುಗುವವರನ್ನು ಸೆರೆಮನೆಯಲ್ಲಿಟ್ಟರು. ರೆಸಿಡೆಂಟರ ಭವನ ಮುತ್ತಲು ಹೋದ ಪುಂಡರನ್ನು ಗುಂಡು ಹಾರಿಸಿ ಚದ ರಿಸಿ ಓಡಿಸಿದರು. ಪಟ್ಟಣದ ಎಲ್ಲ ಭಾಗಗಳಲ್ಲಿ ದಂಡಿನ ಕಾವಲಿಡಲಾಯಿತು. ಹೀಗೆ ಯುಕ್ತಿ, ಶಕ್ತಿ, ಸಾಹಸಗಳಿಂದ ದಂಗೆಯನ್ನು ಶಾಂತ ಮಾಡಿದರು. ಹೈದರಾಬಾದದ ಸ್ಥಿತಿಯು ಹೀಗೆ ನಿರಾಶಾಜನಕ ಪರಿಸ್ಥಿತಿಯಾಗಿದ್ದರಿಂದ ಹುರುಪಿನಿಂದ ಉಬ್ಬಿದ ದಂಗೆಯವರ (ಬಂಡುಖೋರರ) ಬೆನ್ನೆಲವು ಮುರಿ ದಂತಾಗಿ ಹೋಯಿತು.

ದಂಗೆಯಲ್ಲಿ ಇಂಗ್ಲಿಷರಿಗೆ ಸಹಾಯ ಮಾಡಿದ್ದಕ್ಕಾಗಿ ಸಾಲಾರಜಂಗರ ಮೇಲೆ ನಾನಾತರದ ಅಪವಾದ ಆರೋಪಗಳು ಹೊರಿಸಲ್ಪಟ್ಟವು. ಸಾಲಾರ ಜಂಗರನ್ನು ಮೋಸದಿಂದ ಯಮಸದನಕ್ಕಟ್ಟುವ ಒಳ ಸಂಚುಗಳನ್ನು ತಲೆತಿರುಕರು ಹನ್ನೆರಡುಸಲ ಮಾಡಿದರು. ಗುಂಡು ಹಾರಿಸಿದರು, ಆದರೂ ದಂಗೆಖೋರರ ಆಟವೇ ಸಾಗಲಿಲ್ಲ.

ಇಂಥ ಸಂದರ್ಭದಲ್ಲಿ ಇಂಗ್ಲಿಷರು, ರಕ್ತದ ಕಾಲುವೆಯನ್ನು ಹರಿಸಿ ದ್ದರೂ, ಅಸಂಖ್ಯ ಹೆಣಗಳನ್ನು ಕೆಡಹಿದ್ದರೂ, ಸಾಧ್ಯವಾಗದ ಕೆಲಸವನ್ನು ಸರ್ ಸಾಲಾರಜಂಗರವರು ತಮ್ಮ ಜೀವವನ್ನೇ ಗಂಡಾಂತರದಲ್ಲಿ ಕೆಡಹಿ ಇಂಗ್ಲಿಷರಿಗೆ ಸಹಾಯ ಮಾಡಿ ಸಾಧಿಸಿಕೊಟ್ಟರು.

ಇಂಥ ಸಾಹಸದ, ಕೆಲಸಗಳನ್ನು ಕಂಡು ಇಂಗ್ಲಿಷರು ಸಾಲಾರಜಂಗ ರನ್ನು ಮಿತಿಯಿಲ್ಲದೆ ಹೊಗಳಹತ್ತಿದರು. ಆಗಿನ ಹೈದರಾಬಾದದ ರೆಸಿಡೆಂಟ ರಾದ ಕರ್ನಲ್ ಡೆವಿಡ್ಸನ್ನರು ಸಾಲಾರಜಂಗರ ಸ್ತೋತ್ರ ಮಾಲೆಯನ್ನೇ ಸಿದ್ಧ ಮಾಡಿದರು. ಇಂಗ್ಲಂಡದ ವೃತ್ತಪತ್ರಗಳು ಒಂದೇ ಸವನೆ ಸಾಲಾರ ಜಂಗರನ್ನು ಕೊಂಡಾಡಹತ್ತಿದವು. ಗವ್ಹರ್ನರ ಜನರಲ್‌ರಾದ ಲಾರ್ಡ ಕ್ಯಾನಿಂಗರು ಲಕ್ಷ ರೂಪಾಯಿಗಳ ಬೆಲೆಬಾಳುವ ಕಾಣಿಕೆಯನ್ನು ನಿಜಾಮು ಬಾದಶಹರಿಗೂ ಮೂವತ್ತು ಸಾವಿರ ರೂಪಾಯಿಗಳ ಬೆಲೆಬಾಳುವ ಬಹು

ಮಾನವನ್ನು ಸರ್ ಸಾಲಾರಜಂಗರಿಗೂ ಕಳುಹಿಸಿ ಅಭಿನಂದಿಸಿದರು. ಅಲ್ಲದೆ, ತಮ್ಮ ವಶದಲ್ಲಿದ್ದ ರಾಯಚೂರ, ಧಾರಾಸಿವ, ಷೋರಾಪುರಗಳನ್ನು ನಿಜಾಮ ಸರಕಾರಕ್ಕೆ ತಿರುಗಿ ಒಪ್ಪಿಸಿದರು. ವ್ಹಿಕ್ಟೋರಿಯಾ ರಾಣಿಯವರಂತೂ ಸಾಲಾರಜಂಗರು ಬ್ರಿಟಿಶರು ವಿಪತ್ತಿನಲ್ಲಿದ್ದಾಗ ಮಾಡಿದ ಘನ ಸಹಾಯಕ್ಕಾಗಿ ತುಂಬಾ ಸಂತೋಷಪಟ್ಟರಲ್ಲದೆ ಕೇ. ಸಿ ಎಸ್. ಆಯ್. (K. C. S. I) ಎಂಬ ಘನತರವಾದ ಬಿರುದನ್ನು ದಯಪಾಲಿಸಿ ಗೌರವಿಸಿದರು.

ನಿಜಾಮ ಬಾದಶಹರು ಸಾಲಾರಜಂಗರಿಗೆ ೫೦ ಸಾವಿರ ರೂಪಾಯಿ ಬೆಲೆಯ ಉಡುಗರೆಯನ್ನು ಸಾಲಾರಜಂಗ ಮಂತ್ರಿ ಶ್ರೇಷ್ಠರಿಗೆ ಕೊಟ್ಟು ಪ್ರಸನ್ನತೆಯನ್ನು ವ್ಯಕ್ತಮಾಡಿ ಅಭಿನಂದಿಸಿದರು.

ಸನ್ ೧೮೬೯ನೆಯ ಇಸ್ವಿಯ ಫೆಬ್ರುವರಿ ತಿಂಗಳದ ೨೬ನೇ ತಾರೀಖಿನಲ್ಲಿ ೫ನೇ ಆಸಫ್ ಔಹಾರವರು ಹನ್ನೆರಡುವರ್ಷ ರಾಜ್ಯವಾಳಿ ಪರಲೋಕ ಯಾತ್ರೆಯನ್ನು ಮಾಡಿದರು. ೧ನೆಯ ಮಾರ್ಚದ ಶುಭ ಮುಹೂರ್ತದಲ್ಲಿ ಅವರ ಮೂರುವರ್ಷದ ಪುತ್ರನಾದ ಬಾಲ ಮಹಬೂಬ ಅಲೀಖಾನ ಬಹಾದ್ದೂರನು ೬ನೆಯ ಆಸಫ್‌ಜಾಹಾ ನಿಜಾಮ ಉಲ್‌ಮುಲ್ಕನೆಂಬ ಬಿರುದಿನಿಂದ ಸಿಂಹಾಸನವನ್ನೇರಿದನು. ರಾಜ್ಯಕಾರಭಾರವನ್ನು ನೋಡಿಕೊಂಡು ಹೋಗಲು ಸರ್ ಸಾಲಾರ ಜಂಗರೇ ಯೋಗ್ಯರೂ, ವಿಶ್ವಾಸಿಕರೂ, ಎಂದು ಸಂಸ್ಥಾನದ ಸಂಪೂರ್ಣ ಅಧಿಕಾರವನ್ನು ಅವರಿಗೆ ಒಪ್ಪಿಸಲಾಯಿತು. ಷಮ್‌ಷುತ್‌ಉಮರ, ಅಮೀರ ಕಬೀರರು, ಸಾಲಾರಜಂಗರಿಗೆ ರಾಜಕೀಯ ರಥ ನಡೆಸುವದರಲ್ಲಿ ಸಹಾಯಮಾಡಹತ್ತಿದರು. ಮುಂದೆ ಸಾಲಾರಜಂಗರಿಗೆ ಬೇಕಾದ ಸುಧಾರಣೆಗಳನ್ನು ಮಾಡಲು ಯಾವ ತೊಂದರೆಗಳೂ ಉದ್ಭವಿಸಲಿಲ್ಲ.

ಆದರೂ ಸಾಲಾರಜಂಗರು ಯಾವದೇ ಸುಧಾರಣೆಯನ್ನು ಕಾರ್ಯರೂಪಕ್ಕೆ ತರುವದಕ್ಕಿಂತ ಮೊದಲು ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ಮುಂದಾಳುಗಳ ಅನುಮತಿ ತೆಗೆದುಕೊಳ್ಳದೆ ಇರುತ್ತಿರಲಿಲ್ಲ, ಪ್ರಜೆಗಳ

ಅಭಿಪ್ರಾಯ ತೆಗೆದುಕೊಳ್ಳುವದು ಸರ್ ಸಾಲಾರಜಂಗರು ತಾವು ಕೈಕೊಂಡ ಕೆಲಸದ ವಿಜಯದ ಬೀಜಮಂತ್ರವೆಂದೇ ತಿಳಿದುಕೊಂಡಿದ್ದರು. ಪ್ರತಿ ಯೊಂದು ಕೆಲಸಕ್ಕೆ ಪ್ರಜೆಗಳ ಬೆಂಬಲ ಸಿಗಹತ್ತಿತಲ್ಲದೆ ಯಾರೂ ಅವರ ಕಾರ್ಯಗಳ ಕಡೆಗೆ ಬೆರಳು ತೋರಿಸದಂತಾಯಿತು.

ಬಾಲ ಬಾದಶಹನ ಶಿಕ್ಷಣದ ಕಡೆಗೆ ಸಾಲಾರಜಂಗರು ಬಹು ಲಕ್ಷ್ಯ ಕೊಡುತ್ತಿದ್ದರು. ಕ್ಯಾಪ್ಟನ್ ಕ್ಲಾರ್ಕನೆಂಬ ಆಂಗ್ಲ ಶಿಕ್ಷಕನು ಬಾದಶಹನ ಶಿಕ್ಷಣಕ್ಕಾಗಿ ಗೊತ್ತುಮಾಡಲ್ಪಟ್ಟನು. ಈ ಶಿಕ್ಷಕನಿಗೆ ಪ್ರತಿ ತಿಂಗಳು ಮೂರುಸಾವಿರ ರೂಪಾಯಿ ವೇತನ ಕೊಡಲ್ಪಡುತ್ತಿತ್ತು.

## ಸುಧಾರಣೆಗಳು.

ಸರ್ ಸಾಲಾರಜಂಗರು ಮಂತ್ರಿಗಳಾಗುವದಕ್ಕಿಂತ ಮೊದಲು ಹೈದ ರಾಬಾದದಲ್ಲಿ ದಫ್ತರ ಮಾಲ, ದಫ್ತರ ದಿವಾಣಿ ಎಂಬ ಎರಡೇ ಮುಖ್ಯ ಕಚೇರಿಗಳಿದ್ದವು. ಈ ಕಚೇರಿಗಳ ಮೇಲಧಿಕಾರಿಗೆ ದಫ್ತರದಾರನೆಂಬ ಹೆಸರು. ಜಾಗೀರಗಳ ಪಟ್ಟಿಗಳನ್ನಿಡಿಸುವದೂ, ಲೆಕ್ಕಪತ್ರಗಳನ್ನು ಬರೆಸು ವದೂ, ಈ ದಫ್ತರದಾರನ ಕೆಲಸವಾಗಿತ್ತು. ಹೈದರಾಬಾದ ನಗರದ ಹೊರತು ಸಂಸ್ಥಾನದ ಯಾವ ಭಾಗದಲ್ಲಿಯೂ ಪೋಲಿಸ ಕಚೇರಿಗಳಾಗಲಿ, ನ್ಯಾಯ ಸ್ಥಾನಗಳಾಗಲಿ ಇರಲಿಲ್ಲ. ಹೈದರಾಬಾದ ಪಟ್ಟಣದ ಹೊರಗೆ ತಾಲೂಕ ದಾರರೇ ಸರ್ವಾಧಿಕಾರಿಗಳಾಗಿರುತ್ತಿದ್ದರು. ಸರಕಾರಕ್ಕಿಷ್ಟು ಹಣವನ್ನು ಕಳುಹಿಸಿಬಿಟ್ಟರಾಯಿತು. ಈ ಅಧಿಕಾರಿಗಳನ್ನು ನಿಜಾಮ ಸರಕಾರದವರು ಮಾತಾಡಿಸುತ್ತಿರಲಿಲ್ಲ.

ಸಾಲಾರಜಂಗರು ಈ ಪದ್ಧತಿಯನ್ನು ನಿಲ್ಲಿಸಿಬಿಟ್ಟರು. ಪ್ರತಿಯೊಂದು ಜಿಲ್ಹೆಗೆ ಜಿಲ್ಹಾಧಿಕಾರಿಗಳನ್ನು ನೇಮಿಸಿ ಅವರ ಸಂಬಳವನ್ನು ಗೊತ್ತುಮಾ ಡಿದರು. ನ್ಯಾಯದಾನವನ್ನು ಮಾಡುವದಕ್ಕಾಗಿ ಸಂಸ್ಥಾನದ ಎಲ್ಲ ಭಾಗಗ ಳಲ್ಲಿಯೂ ನ್ಯಾಯ ಕೋರ್ಟುಗಳು ಸ್ಥಾಪಿಸಲ್ಪಟ್ಟವು. ಕಾಯಿದೆ ಮಾಡು ವದಕ್ಕಾಗಿ ಒಂದು ಕಾಯಿದೆಮಂಡಲದ ಏರ್ಪಾಟು ಮಾಡಲಾಯಿತು.

ಜಿಲ್ಹಾಧಿಕಾರಿಗಳ ಕೈಕೆಳಗೆ ಪೋಲಿಸರನ್ನು ಕೊಟ್ಟು ಆಯಾ ಜಿಲ್ಹೆಯ ಶಾಂತತೆಯನ್ನು ಕಾಯುವ ಹೊಣೆಯನ್ನು ಜಿಲ್ಹಾಧಿಕಾರಿಗಳ ಮೇಲೆ ಹೊರಿಸಲಾಯಿತು. ಈ ಪದ್ಧತಿಗೆ ಜಮಿಯತ್ "ಜಿಲ್ಹಾದಾರಿ" ಎಂಬ ಹೆಸರು. ಇದರ ಮೇಲ್ವಿಚಾರಣೆಗಾಗಿ ಹೈದರಾಬಾದ ನಗರದಲ್ಲಿ ಒಂದು ಕಮಿಟಿಯ ನೇಮಕವಾಯಿತು. ಪ್ರತಿಯೊಂದು ತಾಲೂಕಿಗೆ ತಹಶೀಲ ದಾರರ ನೇಮಕವಾಗಿ, ಆಯಾ ತಾಲೂಕಿನ ಉತ್ಪನ್ನವು ತಹಶೀಲ ಕಚೇರಿ ಯಲ್ಲಿಯೇ ಇಡುವ ವ್ಯವಸ್ಥೆ ಮಾಡಲಾಯಿತು.

ಕ್ರಿ. ಶ. ೧೮೬೪ರಲ್ಲಿ ಬೋರ್ಡ ಆಫ್ ರಿವ್ಹಿನ್ಯೂ, ಸ್ಥಾಪಿಸಲ್ಪಟ್ಟಿತು. ೧೮೬೬ರಲ್ಲಿ ಪೋಲೀಸಖಾತೆ, ೧೮೭೦ರಲ್ಲಿ ಟಪಾಲುಖಾತೆ, ೧೮೬೨ರಲ್ಲಿ ಟಂಕಸಾಲಿ, ೧೮೬೩ರಲ್ಲಿ ಅಬಕಾರಿ, ೧೮೬೬ರಲ್ಲಿ ಕರೋಡಗಿರಿ, ೧೮೮೦ರಲ್ಲಿ ವೈದ್ಯಕೀಖಾತೆ, ಅರಣ್ಯಖಾತೆ, ಶಿಕ್ಷಣಖಾತೆ, ಇಂಜನಿಯರಿಂಗ್ ಲೋಕೋ ಪಯೋಗ ಖಾತೆಗಳು ಸ್ಥಾಪಿಸಲ್ಪಟ್ಟವು. ಮತ್ತು ಹೈದರಾಬಾದದಿಂದ ವಾಡೀ ವರೆಗೂ, ರೇಲ್ವೆ ಆಯಿತು. ಹೀಗೆಯೇ ವರುಷ ವರುಷಕ್ಕೆ ಹೊಸ ಹೊಸ ಸುಧಾರಣೆಗಳಾಗುತ್ತ ಹೋಗಿ ೧೮ ಲಕ್ಷ ಇದ್ದ ಸಂಸ್ಥಾನದ ಉತ್ಪ ನ್ನವು ೨ ಕೋಟಿಯ ವರೆಗೆ ಬೆಳೆಯಿತು.

ಸರ್ ಸಾಲಾರಜಂಗರು ಮತ್ತೊಂದು ವಿಷಯಕ್ಕಾಗಿ ಹಗಲಿರುಳು ಯೋಚಿಸುತ್ತಿದ್ದರು. ಅದು ಬಿರಾರದ ವಿಷಯವಾಗಿತ್ತು. ಹೈದರಾಬಾದ ದಲ್ಲಿರತಕ್ಕ ಇಂಗ್ಲಿಷರ ಸೈನ್ಯದ ವೆಚ್ಚಕ್ಕೆಂದು ೧೮೫೩ ರಲ್ಲಿ ಬಿರಾರ, ಧಾರಾಶಿವ, ರಾಯಚೂರಗಳು ಈಸ್ಟ ಇಂಡಿಯಾ ಕಂಪನಿಗೆ ಒಪ್ಪಿಸಲ್ಪಟ್ಟಿದ್ದವು. ೧೮೫೭ರಲ್ಲಿ ಆದ ದಂಗೆಯಲ್ಲಿ ಸಹಾಯ ಮಾಡಿದ್ದಕ್ಕಾಗಿ ಬಿರಾರದ ಹೊರ ತಾಗಿ ಬ್ರಿಟಿಷರ ವಶದಲ್ಲಿದ್ದ ಎಲ್ಲ ಜಿಲ್ಹೆಗಳು ನಿಜಾಮ ಸರಕಾರಕ್ಕೆ ಮರಳಿ ಬಂದವು. ಆದರೆ ಬಿರಾರನ್ನು ಮಾತ್ರ ಬ್ರಿಟಿಷರು ಬಿಡಲಿಲ್ಲ.

ಸರ್ ಸಾಲಾರಜಂಗರು ಬಿರಾರನ್ನು ಪುನಃ ಹೈದರಾಬಾದ ಸಂಸ್ಥಾನಕ್ಕೆ ಸೇರಿಸಬೇಕೆಂದು ವಿಶ್ವಪ್ರಯತ್ನ ನಡೆಸಿದರು. ಹಿಂದುಸ್ತಾನ ಸರಕಾರದೊಡನೆ ಪತ್ರವ್ಯವಹಾರಗಳಾದವು. ಸೈನ್ಯದ ವೆಚ್ಚಕ್ಕಾಗಿ ನಗದು ೧೨ ಕೋಟಿ

ಇಟ್ಟುಕೊಂಡಾದರೂ ಬಿರಾರನ್ನು ಬಿಡಲು ಕೋರಿಕೊಳ್ಳುವದು ಆಯಿತು. ಆದರೇನು? ಎಲ್ಲವೂ ಬಡವನು ಸಾವುಕಾರನಿಗೆ ಬಡ್ಡೀಬಿಡುವಂತೆ ಕೇಳಿ ಕೊಂಡಂತೆಯೇ ಆಯಿತು. ಮುಂದೇನು ಯೋಚನೆ ಎಂಬ ವಿಚಾರದಲ್ಲಿ ಸಾಲಾರಜಂಗರು ಬಿದ್ದಿರಲು ಇಂಗ್ಲಂಡಕ್ಕೆ ಪ್ರಯಾಣ ಬೆಳೆಸಲು ಮಂತ್ರಿ ಗಳಿಗೆ ಆಮಂತ್ರಣ ಬಂದಿತು. ಈ ಆಮಂತ್ರಣದಿಂದ ಸಾಲಾರಜಂಗರಿಗೆ ಸಮಾಧಾನವೆನಿಸಿತು. ಇಂಗ್ಲಂಡಕ್ಕೆ ಹೋಗಿ ಅಲ್ಲಿಯೇ ಬಿರಾರದ ಪ್ರಶ್ನೆ ಬಿಡಿಸಿಕೊಂಡು ಬರಬೇಕೆಂದು ನಿರ್ಧರಿಸಿದರು

೧೮೭೬ರಲ್ಲಿ ಸರ್ ಸಾಲಾರಜಂಗರು ತಮ್ಮ ಪರಿವಾರದೊಂದಿಗೆ ಇಂಗ್ಲಂಡಕ್ಕೆ ಪ್ರಯಾಣ ಬೆಳೆಸಿದರು. ಇಟಲಿ ಫ್ರಾನ್ಸದ ಮಾರ್ಗವಾಗಿ ಇಂಗ್ಲಂಡಕ್ಕೆ ಹೋಗಿ ತಲುಪಿದರು. ಹೋದ ಹೋದಲ್ಲೆಲ್ಲಾ ಅಪೂರ್ವ ಸ್ವಾಗತವಾದದ್ದಲ್ಲದೆ ನಾ ಮುಂದೆ ನೀ ಮುಂದೆ ಎಂದು ಸಾಲಾರಜಂಗರ ದರ್ಶ ನಕ್ಕಾಗಿ ಹಾತೊರೆಯುತ್ತಿದ್ದರು. ಮಾನಪತ್ರ ಮೇಜವಾನಿಗಳಿಗಂತೂ ಲೆಕ್ಕವಿರಲಿಲ್ಲ. ಲಂಡನ್ನ ವೃತ್ತಪತ್ರಗಳಲ್ಲಂತೂ ಸಾಲಾರಜಂಗರ ಸುದ್ದಿಯೇ ಸುದ್ದಿ.

ಆಕ್ಸಫರ್ಡ ಯುನಿವ್ಹರ್ಸಿಟಿಯವರು (D C L) ಡಿ. ಸಿ. ಎಲ್. ಎಂಬ ಬಿರುದನ್ನೂ ಲಂಡನ್ನ ಮೇಯರರು ಮಾನಪತ್ರವನ್ನೂ ಕೊಟ್ಟರಲ್ಲದೆ ಎಡ್ವರ್ಡ ರಾಜಕುಮಾರರು ಸಾಲಾರಜಂಗರು ವಾಸಿಸಿದ ಸ್ಥಳಕ್ಕೇನೇ ಬಂದು ಮಾತನಾಡಿಸಿ ಸನ್ಮಾನಿಸಿದರು.

ಜುಲೈ ೩ನೆಯ ತಾರೀಖಿನ ದಿವಸ ವಿಂಡಸರ ಕ್ಯಾಸಲದಲ್ಲಿ ವಿಕ್ಟೋ ರಿಯಾ ಮಹಾರಾಣಿಯವರ ದರ್ಶನವು ಸರ್ ಸಾಲಾರಜಂಗರವರಿಗಾಯಿತು. ಚಕ್ರವರ್ತಿನಿಯವರು ಸಾಲಾರಜಂಗರ ಗುಣಗಾನಮಾಡಿ ಇಂಗ್ಲಂಡದ ವರೆಗೆ ಬಂದು ಭೆಟ್ಟಿಕೊಟ್ಟದ್ದಕ್ಕಾಗಿ ಸಂತೋಷಪಟ್ಟರು. ಮೇಲಿಂದ ಮೇಲೆ ಮೇಜವಾನಿಗಳು ಮಾನಪತ್ರಗಳು ಸಾಲಾರಜಂಗರವರಿಗೆ ಮೂರು ತಿಂಗಳ ವರೆಗೆ ನಡೆದಿದ್ದವು. ಅಂಥ ಸಂದರ್ಭದಲ್ಲಿ ಬಿರಾರದ ಪ್ರಶ್ನೆ ಹಾಗೆಯೇ ಉಳಿಯಿತು.

ಸರ್ ಸಾಲಾರಜಂಗರು ಇಂಗ್ಲಂಡದಿಂದ ಮರಳಿ ಬರುವದರೊಳಗಾಗಿ ರಾಯಚೂರ ಜಿಲ್ಹೆಯಲ್ಲಿ ಬರಗಾಲದ ಹಾವಳಿಯಾಗಿತ್ತು. ಇದೇ ಆ ಧಾತು ಸಂವತ್ಸರದ ಡೌಗೀಬರ. ಜನಗಳು ಬರಗಾಲದ ದವಡಿಗೆ ಸಿಕ್ಕು ನುಚ್ಚು ನುಚ್ಚಾಗಹತ್ತಿದ್ದರು. ಹೊಟ್ಟೆಗೆ ಅನ್ನವಿಲ್ಲದ್ದರಿಂದ ನೂರು ರೂಪಾಯಿ ಬೆಲೆ ಬಾಳುವ ದನವನ್ನು ಮೂರು ರೂಪಾಯಿಗೆ ಸಹ ಕೇಳುವವರಿಲ್ಲದಂತಾಗಿತ್ತು. ದನಗಳಿಗೆ ಹಿಡಿಮೇವು ದೊರೆಯದೆ ಈಚಲಗರಿ ಕೂಡ ಅಪರೂಪವಾಗಿತ್ತು. ಗೇಣುಹೊಟ್ಟೆಯ ಮುಂದೆ ಹೆಂಡರು ಮಕ್ಕಳು ಬೆಲೆ ಇಲ್ಲದ ಪದಾರ್ಥಗಳೆಂದು ಕಾಣಹತ್ತಿದರು. ಒಂಬತ್ತು ತಿಂಗಳು ಹೊತ್ತ ಹೆತ್ತಮ್ಮಗಳೇ ತಮ್ಮ ಮಕ್ಕಳನ್ನು ಮಾರಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಆಗ್ಗೆ ಒಂದು ತೊಲೆ ಬಂಗಾರವನ್ನು ಆರು ರೂಪಾಯಿಗಳಿಗೆ ಕೇಳುವವರೇ ಇರಲಿಲ್ಲ. ಮುದುಕರು, ಹೆಳವರು, ಕೈಲಾಗದವರು ಹಾದಿಯ ಹೆಣಗಳಾಗಿ ಹೋದರು. ಇಂಥ ಚಿತ್ರವನ್ನು ಕೇಳಿ ಮತ್ತು ನೋಡಿದ ನಮ್ಮ ಸರ್ ಸಾಲಾರ ಜಂಗರು ಕಣ್ಣೀರುದುರಿಸಿದರು. ಕನಿಕರದಿಂದ ಮನಕರಗಿ ನೀರುನೀರಾಗಿಹೋಯಿತು. ಹಸಿದ ಮಕ್ಕಳಿಗೆ ಹೆತ್ತಮ್ಮನು ಹಾಲುಣಿಸಲು ಧಾವಿಸಿ ಬಂದಂತೆ ನಮ್ಮ ಸಾಲಾರಜಂಗರು ರೈತರ ಸಹಾಯಕ್ಕಾಗಿ ಬಂದು ಬರಗಾಲ ನಿವಾರಣೆಯ ಕಾರ್ಯವನ್ನೇ ಕೈಕೊಂಡರು. ಭೂಕಂದಾಯದಲ್ಲಿ ಸೂಟುಬಿಟ್ಟರು. ಕೆಲವು ಭಾಗದಲ್ಲಿ ತಹಕೂಬ ಕೊಟ್ಟರು. ಅನಾಥಾಲಯಗಳನ್ನು ತೆರೆದು ಅನ್ನ ಛತ್ರವನ್ನಿಡಿಸಿದರು. ಸಾವಿನೊಡನೆ ಹೋರಾಡುತ್ತಿದ್ದ ರೈತರು ಛತ್ರಗಳಲ್ಲಿ ಉಂಡು ಹೊಗಳಹತ್ತಿದರು.

ಈ ರೀತಿ ರಾಜ ಪ್ರಜೆಗಳನ್ನು ದೇಹ ಪ್ರಾಣಗಳಂತೆ ಕಾಣುತ್ತಿದ್ದ ಹೈದರಾಬಾದ ನಕ್ಷತ್ರವಾದ ಸಾಲಾರಜಂಗ ಬಹಾದ್ದೂರರವರು ಕ್ರಿ. ಶ. ೧೮೮೩ನೆಯ ಇಸ್ವಿ ಫೇಬ್ರುವರಿ ೮ನೆಯ ತಾರೀಖಿನ ದಿವಸ ಕಾಲರಾ ಬೇನೆಯಿಂದ ಮೃತಪಟ್ಟರು. ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ!

ದಿವಂಗತ **ಸರ್ ಸಾಲಾರಜಂಗರಿಗೆ** ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು ಇದ್ದರು. ಹಿರಿಯ ಮಕ್ಕಳ ಹೆಸರು, ನವಾಬ ಮೀರ ಲಾಯಕ ಅಲೀಖಾನ ಬಹದ್ದೂರ. ಇವರೇ ೨ನೇ ಸಾಲಾರಜಂಗರು. ೧೮೬೨

ರಲ್ಲಿ ಇವರ ಜನನವಾಯಿತು. ಹೆಸರಿಗೆ ಸರಿಯಾಗಿ ಇವರು ಜಾಣರೂ, ಶ್ರೇಷ್ಠ ಸಾಹಿತಿಗಳೂ, ಮೇಲ್ತರಗತಿಯ ಭಾಷಣಕಾರರೂ, ಆಂಗ್ಲ ಭಾಷಾ ಪ್ರವೀಣರೂ, ಆಗಿದ್ದರು. ೧೮೮೨ರಲ್ಲಿ ಇವರು ಇಂಗ್ಲಂಡಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಇವರಿಗೆ ಅಪೂರ್ವ ಸ್ವಾಗತವಾಗಿ ಘನಗೌರವವು ದೊರೆಯಿತು.

ಕ್ರಿ. ಶ. ೧೮೮೪ನೆಯ ಮಾರ್ಚ ತಿಂಗಳಲ್ಲಿ ಹೈದರಾಬಾದ ಸಂಸ್ಥಾನದ ಮುಖ್ಯ ಮಂತ್ರಿಗಳಾದರು. ಮೂರು ವರುಷ ಎರಡು ತಿಂಗಳು ರಾಜ್ಯದ ರಥವನ್ನು ನಡಿಸಿ ಅರಸು ಪ್ರಧಾನಿಗಳ ನಡುವೆ ಮತಭೇಧವಾಗಿ ಮಂತ್ರಿ ಪದಕ್ಕೆ ರಾಜೀನಾಮೆ ಕೊಟ್ಟರು.

ಕ್ರಿ. ಶ. ೧೮೮೭ರಲ್ಲಿ ೨ನೆಯ ಸಲ ಇಂಗ್ಲಂಡಕ್ಕೆ ಪ್ರಯಾಣ ಬೆಳೆಸಿದರು. ವ್ಹಿಕ್ಟೋರಿಯಾ ಮಹಾರಾಣಿಯವರು ಆಗ ಅವರಿಗೆ ಕೇ. ಸಿ. ಆಯ್ ಈ. (K. C. I. E.) ಎಂಬ ಬಿರುದು ಕೊಟ್ಟು ಗೌರವಿಸಿದರು.

ಇಂಗ್ಲಂಡದಿಂದ ಬಂದ ನಂತರ ಕೊಪ್ಪಳಕ್ಕೆ ದಯಮಾಡಿಸಿದರು. ಆಗ ಕೊಪ್ಪಳದಲ್ಲಿ ಗಾಮಜಿ ನರಸಿಂಗರಾಯರೆಂಬ ತಾಲೂಕದಾರರಿದ್ದರು. ೧ನೆಯ ಸಾಲಾರಜಂಗರು ಹೇಗೆ ಹೈದರಾಬಾದ ಸಂಸ್ಥಾನದ ಸೇವೆ ಮಾಡಿ ಘನ ಕೀರ್ತಿ ಪಡೆದರೋ ಹಾಗೆಯೇ ನರಸಿಂಗರಾಯರು ಸಾಲಾರಜಂಗರ ಜಾಗೀರಿಯ ಸೇವೆ ಮಾಡಿ ಹೆಸರಿಗೆ ಬಂದರು. ಹಿಂದುಸ್ತಾನದ ಇತಿಹಾಸದಲ್ಲಿ ಬ್ರಿಟಿಷರ ಹೆಸರಿನೊಡನೆ ಸಾಲಾರಜಂಗರ ಹೆಸರು ಹೇಗೆ ಇರುವದೋ ಹಾಗೆಯೇ ನರಸಿಂಗರಾಯರ ಹೆಸರೂ ಸಾಲಾರಜಂಗರ ಸಂಸ್ಥಾನದ ಇತಿಹಾಸದಲ್ಲಿಯೂ ಉಳಿಯುವದು.

ನರಸಿಂಗರಾಯರು ಹೊರಟು ಹೋಗಿ ಅರ್ಧ ಶತಮಾನವಾಗಿದ್ದರೂ ರೈತರು ಅವರನ್ನು ಈಗಲೂ ಕೊಂಡಾಡುತ್ತಿರುವರು. ಕೊಪ್ಪಳದ ಪ್ಲ್ಯಾನು ಸಿದ್ಧಮಾಡಿಸಿ ನೂತನ ಪದ್ಧತಿಯಂತೆ ಕೊಪ್ಪಳ ನಗರವನ್ನು, ಕಚೇರಿಗಳನ್ನು, ಅಂದವಾದ ನಾಲ್ಕು ಆಗಸಿಗಳನ್ನು, ನಗರದ ಮಧ್ಯದಲ್ಲಿರುವ ಹೌದನ್ನು, ಅನೇಕ ಮಂದಿರ, ಮಸೀದೆಗಳನ್ನು, ಧರ್ಮಶಾಲೆಗಳನ್ನು ಕಟ್ಟಿಸಿದವರೇ ನರಸಿಂಗರಾಯರು.

ಇವರು ವಿದ್ಯಾವಂತರನ್ನು ಪ್ರೀತಿಸುತ್ತಿದ್ದರು. ಅನೇಕರಿಗೆ ಭೂಮಿಗಳನ್ನು ಸಹ ಕೊಟ್ಟಿರುವರು. ಮುಖ್ತ್ಯಾರ ಗಂಜದಲ್ಲಿರುವ ಪ್ಯಾಟಿ ಹನುಮಂತದೇವರ ನೈವೇದ್ಯ, ದೀಪ, ರಥೋತ್ಸವಕ್ಕಾಗಿ ಸರಕಾರದಿಂದ ಹಣ ಕೊಡುವ ಏರ್ಪಾಟು ಮಾಡಿರುವರು. ಕೊಪ್ಪಳದಲ್ಲಿರುವ ಹುಲಿ ಕೆರೆಯನ್ನು ಕಟ್ಟಿಸಿ ನಳಗಳನ್ನು ಹಾಕಿ ಮನೆ ಮನೆಗೆ ನೀರಿನ ಸೌಕರ್ಯವನ್ನು ಮಾಡಿ ಕೊಟ್ಟರು. ಅದೇ ಕಾಲಕ್ಕೆ ಗದಗದಿಂದ ಬಳ್ಳಾರಿಗೆ ರೇಲ್ವೆ ಆಯಿತು. ಇವರು ರೇಲ್ವೆ ಮ್ಯಾಜಿಸ್ಟ್ರೇಟರೂ ಆಗಿದ್ದರು. ಕೊಪ್ಪಳದ ಅಧಿಕಾರಿಗಳಿಗೆ ಗುಂತಗಲ್ಲಿನಿಂದ ಧಾರವಾಡದ ವರೆಗೆ ರೇಲ್ವೆ ಪ್ರವಾಸಕ್ಕಾಗಿ ೧ನೆಯ ತರಗತಿಯ ಟಿಕೀಟುಗಳು, ಕಂಪನಿಯಿಂದ ಗೌರವದ ಪಾಸು ಎಂದು ದೊರೆತಿದ್ದವು. ರಾಜನಿಷ್ಠೆಯನ್ನು ವ್ಯಕ್ತ ಮಾಡುವದಕ್ಕಾಗಿ, ಹುಲಿಗಿಗೆ ಮುನಿರಾಬಾದ ಎಂಬ ಹೆಸರಿಟ್ಟು ಕರೆದರು. ಕೊಪ್ಪಳದಲ್ಲಿ ಮುಖ್ತ್ಯಾರ ಗಂಜ ಬಜಾರವು ಇವರಿಂದಲೇ ಆಯಿತು.

ತುಂಗಭದ್ರೆಯನ್ನು ತಡೆದು ಕಟ್ಟಿಸಿದ ಆಣೇಕಟ್ಟು ಕಾಲುವೆಗಳು ನರಸಿಂಗರಾಯರು ಮಾಡಿದ ಮಹತ್ವದ ಕೆಲಸಗಳ ಕುರುಹುಗಳಾಗಿವೆ. ಈ ಆಣೇಕಟ್ಟು ಕೊಪ್ಪಳದಿಂದ ೧೨ ಮೈಲು ದೂರದಲ್ಲಿರುವ ಕೋರಗಲ್ಲ ಹತ್ತಿರ ಇರುವದು.

ಆನೇಗುಂದಿಯ ಅರಸರ ವಶದಲ್ಲಿ ಕೊಪ್ಪಳ ಇದ್ದಾಗ್ಗೆ ೧೩ನೇ ಶಕೆಯಲ್ಲಿ ಬುಕ್ಕ ಭೂಪಾಲನ ಆಜ್ಞೆಯ ಮೇರೆಗೆ ಡಣಕ್ಕ ಮುದ್ದಣ್ಣನೆಂಬವನು ಮೊದಲು ಆ ಸ್ಥಳದಲ್ಲಿ ಆಣೇಕಟ್ಟನ್ನು ಕಟ್ಟಿಸಿದ್ದನೆಂದು ತಿಳಿವವೆ. ಡಣಕ್ಕ ಮುದ್ದನು ಕಟ್ಟಿಸಿದ ಆಣೇಕಟ್ಟು ಶಿಥಿಲವಾಗಿದ್ದರಿಂದ ನರಸಿಂಗರಾಯರು ಅದರ ಹತ್ತಿರವೇ ಹೊಸದಾಗಿ ಆಣೇಕಟ್ಟು ಕಟ್ಟಿಸಿದರು.

ಕೊರಗಲ್ ಆಣೇಕಟ್ಟಿನಿಂದ ಹೊರಟ ಕಾಲುವೆಗಳ ಉದ್ದಳತೆ ೩೨ ಮೈಲಿದ್ದು ಐದು ಸಾವಿರ ಎಕರೆಗಿಂತಲೂ ಹೆಚ್ಚು ಭೂಮಿಗೆ ನೀರು ಉಣಿಸುವ ಏರ್ಪಾಟು ಮಾಡಲಾಗಿದೆ. ಈ ಆಣೇಕಟ್ಟು, ಕಾಲುವೆಗಳನ್ನು ಕಟ್ಟಿಸುವಾಗ ನರಸಿಂಗರಾಯರು ಸ್ವತಃ ಕಲ್ಲು

ಮಣ್ಣು ಹೊರುತ್ತಿದ್ದರಂತೆ. ರೈತರಿಗೆ ಕಾಲುವೆಯ ಮಹತ್ವವನ್ನು ತಿಳಿಸಿ ಹೇಳಿ ಅವರನ್ನು ಪ್ರೋತ್ಸಾಹಿಸಿ ಸಂತೋಷದಿಂದ ತಾವು ಕೈಕೊಂಡ ಕೆಲಸದಲ್ಲಿ ನೆರವಾಗುವಂತೆ ಮಾಡುತ್ತಿದ್ದರಂತೆ. ಅವರು ಪ್ರೇಮದಿಂದ ರೈತರನ್ನು ಆಳುತ್ತಿದ್ದರಲ್ಲದೆ ಅಧಿಕಾರದ ದರ್ಪವೇ ಇರಲಿಲ್ಲವಂತೆ. ಕೇವಲ ಮೂರು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಎಲ್ಲ ಕೆಲಸ ಮುಗಿಸಿ, ಸರಕಾರಕ್ಕೂ, ರೈತರಿಗೂ ಉಪಯುಕ್ತ ಕೆಲಸ ಮಾಡಿ ಶಾಶ್ವತಲಾಭಕ್ಕೆ ಮಾರ್ಗ ಮಾಡಿ, ಕಬ್ಬು, ನೆಲ್ಲು, ಬಾಳೆ, ಅರಿಷಿಣ ಮೊದಲಾದ ಬೆಳೆಗಳನ್ನು ಬೆಳೆದುಕೊಳ್ಳುವಂತೆ ರೈತರಿಗೆ ಅನುಕೂಲ ಮಾಡಿ ಕೊಟ್ಟವರೇ ಈ ನರಸಿಂಗರಾಯರಂತೆ.

ನರಸಿಂಗರಾಯರ ಮಕ್ಕಳಾದ ಗಾಮಜೀ ರಂಗರಾಯರು ಸಹ ತಂದೆಯಂತೆ ಸಂಸ್ಥಾನದ ಸೇವೆಯನ್ನು ನಿಷ್ಠೆಯಿಂದ ಮಾಡುತ್ತ ಬಂದು ಹೆಸರುವಾಸಿಗಳಾಗಿದ್ದಾರೆ. ಇವರು ಈಗಿನ ನವಾಬಸಾಹೇಬರ ಬೊಕ್ಕಸದ ಮುಖ್ಯಾಧಿಕಾರಿಗಳಾಗಿದ್ದಾರೆ.

೨ನೆಯ ಸಾಲಾರಜಂಗ ಬಹದ್ದೂರರವರು, ಕೊಪ್ಪಳಕ್ಕೆ ಬಂದು ಹೋದ ಒಂದೇ ಒಂದು ವರ್ಷದೊಳಗಾಗಿ ತಮ್ಮ ಪ್ರೀತಿಗೆ ಪಾತ್ರವಾದ ಒಂದು ತಿಂಗಳದ ಎಳೆ ಮಗುವನ್ನು ಬಿಟ್ಟು ಪರಲೋಕವಾಸಿಯಾದರಂತೆ. ಸಾಯುವಾಗ ಇವರು ೨೭ ವರುಷದ ತರುಣರಿದ್ದರಂತೆ.

೨ನೆಯ **ಸಾಲಾರಜಂಗರವರು** ಮೃತಪಟ್ಟ ವಾರ್ತೆಯಿಂದ **ಮಹಬೂಬ ಅಲೀಖಾನ ಬಾದಶಹರು** ಕಣ್ಣೀರು ತೆಗೆದರಂತೆ. ಕೂಡಲೆ ಸಾಲಾರಜಂಗರವರ ಅರಮನೆಗೆ ದಯಮಾಡಿಸಿ ದುಃಖದಲ್ಲಿದ್ದ ಜನರನ್ನು ಸಂತೈಸಿ, ೨ನೆಯ ಸಾಲಾರಜಂಗರ ಸುಪುತ್ರರಾದ ಕೇವಲ ಒಂದು ತಿಂಗಳದ, ಮಗುವಾದ **ನವಾಬ ಲಾಯಕ ಅಲೀಖಾನರಿಗೆ ಸಾಲಾರಜಂಗ ಬಹದ್ದೂರ** ಎಂಬ ಪದವಿಯನ್ನು ಕೊಟ್ಟು ಗೌರವಿಸಿದರಂತೆ. ಮತ್ತು ಸಾಲಾರಜಂಗ ಬಹದ್ದೂರರವರ ಜಾಗೀರಿಯ ಮೇಲ್ವಿಚಾರಣೆಯನ್ನು ಸ್ವತಃ ತಾವೇ ನೋಡಹತ್ತಿದರಂತೆ.

೨ನೆಯ **ಸಾಲಾರಜಂಗ ಬಹದ್ದೂರರವರ** ಪುತ್ರಶ್ರೇಷ್ಠರೇ ಕೊಪ್ಪಳ ಜಾಗೀರಿಯ ಈಗಿನ ಒಡೆಯರು. ಇವರ ಹೆಸರು **ನವಾಬ ಮೀರ ಯೂಸಫ್ ಅಲೀಖಾನ ಬಹದ್ದೂರ**ರರು; ಇವರೇ ೩ನೆಯ ಸಾಲಾರಜಂಗರು. ಇವರು ಜನಿಸಿದ್ದು ೧೮೮೯ನೆಯ ಇಸ್ವಿಯ ಜೂನ ತಿಂಗಳು ೧೩ನೆಯ ತಾರೀಖಿನ ದಿವಸ ಬೆಳಿಗ್ಗೆ ೩— ೪೦. ಘಂಟೆಗೆ. ಅಜ್ಜಂದಿರಾದ ೧ನೆಯ ಸಾಲಾರಜಂಗರಂತೆಯೇ ಇವರು ಚಿಕ್ಕಂದಿನಲ್ಲಿ ಯಾವಾಗಲೂ ಅನಾರೋಗ್ಯದಿಂದ ಬಳಲುತ್ತಿದ್ದರಂತೆ. ಇವರ ವಿದ್ಯಾಭ್ಯಾಸವು ನಿಜಾಮು ಬಾದಶಹರ ನೇತೃತ್ವದಲ್ಲಿ ಜರುಗಿತಂತೆ. ಅರಮನೆಯಲ್ಲಿ ಹೈದರಾಬಾದ ಅರಸು ಮಕ್ಕಳ ಶಾಲೆಯಲ್ಲಿ ಇವರ ವಿದ್ಯಾಭ್ಯಾಸವಾಯಿತಂತೆ. ಉರ್ದು, ಫಾರ್ಸಿ, ಅರಬ್ಬಿ, ಫ್ರೆಂಚ ಮತ್ತು ಜರ್ಮನ್ ಭಾಷೆಗಳನ್ನು ಚೆನ್ನಾಗಿ ಬಲ್ಲವರಿರುತ್ತಾರೆ. ಇಂಗ್ಲಿಷನಂತೂ ಇವರಿಗೆ ಸರ್ವೋತ್ಕೃಷ್ಟ ಬರುತ್ತದೆ. ಇವರು ಅಜ್ಜಂದಿರಂತೆ ರಾಜಕಾರಣ ಪಟುಗಳೂ, ತಂದೆಯಂತೆ ಶ್ರೇಷ್ಠ ಸಾಹಿತಿಗಳೂ, ತಾತನಂತೆ ದೇವರಲ್ಲಿ ಭಕ್ತಿಯುಳ್ಳವರೂ, ಇರುತ್ತಾರೆ. ಇವರ ಅರಮನೆಯಿಂದ ಬರುವ ಪತ್ರಗಳ ಮೇಲೆ “ದೇವರಲ್ಲಿ ನನ್ನ ನಂಬಿಗೆ” ಎಂಬ ಅಕ್ಷರಗಳನ್ನು ನೋಡಬಹುದಾಗಿದೆ.

೩ನೆಯ ಸಾಲಾರಜಂಗರು ಉತ್ತಮ ಕವಿಗಳು ಇದ್ದು ಫಾರಶೀಭಾಷೆಯಲ್ಲಿ ಅನೇಕ ಕವನಗಳನ್ನು ಬರೆದಿರುವರು. ಇವರ ಜ್ಞಾಪಕಶಕ್ತಿಯು ಆಶ್ಚರ್ಯಕರವಾಗಿರುವದು. ಒಮ್ಮೆ ಯಾರನ್ನಾದರೂ ನೋಡಿದ್ದರೆ ಸಾಕು ಪುನಃ ಆ ವ್ಯಕ್ತಿಯು ಹತ್ತುವರ್ಷಗಳ ನಂತರ ಭೆಟ್ಟಿಯಾದರೂ ಅವರ ಹೆಸರುಗೊಂಡೇ ಮಾತನಾಡಿಸುವರು. ನಾನು ಸನ್ ೧೩೩೦ನೆಯ ಫಸಲಿಯಲ್ಲಿ ಹೈದರಾಬಾದದಲ್ಲಿ ಉರ್ದು ಭಾಷೆಯನ್ನು ಕಲಿಯುವದಕ್ಕೆ ಹೋದಾಗ ನನ್ನ ಸಂಗಡ ವಕೀಲಿ ಅಭ್ಯಾಸ ಮಾಡುತ್ತಿದ್ದ ಮಿ॥ ತಿಮ್ಮನಗೌಡಾ ವಕೀಲ ಬನ್ನಿಕೊಪ್ಪ, ಮಿ॥ ಎಲ್ಲಪ್ಪಗೌಡಾ ವಕೀಲ ಬನ್ನಿಕೊಪ್ಪ, ಮಿ॥ ಪಟದಯ್ಯಾಸ್ವಾಮಿ ವಕೀಲ ಕೊಪ್ಪಳ, ಮಿ॥ ಸಂಗಯ್ಯಾ ಸ್ವಾಮಿ ವಕೀಲ ನಾಗರಹಾಳ, ಮಿ॥ ಹಂಪನಗೌಡಾ ವಕೀಲ ಮೈಲಾಪೂರ, ಮಿ॥ ಪಂಚಾಕ್ಷರಯ್ಯಾ ಹಿರೇಮಠ ವಕೀಲ ನವಲಿ, ಮಿ॥ ಕಳಕನಗೌಡಾ ವಕೀಲ [illegible] ಮಿ॥ ಬಸನಗೌಡಾ ಕೆಸರಟ್ಟಿ ವಕೀಲ ಕಲ್ಮಂಗಿ ಇವ

ರೆಲ್ಲರ ಆಪ್ತಾಲೋಚನೆಯ ಮೇರೆಗೆ ಸರ್ ಸಾಲಾರಜಂಗ ಬಹದ್ದೂರರನ್ನು ಕಂಡೆನು. ನಾನು ಪೋಲಿಸ ಟ್ರೇನಿಂಗ ಕಾಲೇಜದಲ್ಲಿ ಷರೀಕು ಆಗುವೆನು. ಈ ಬಗ್ಗೆ ತಮ್ಮಿಂದ ನನಗೊಂದು ಸದಾಖತ್‌ನಾಮಾ ದೊರೆಯಬೇಕೆಂದು ಆಶಿಸಿದೆನು. ಕೂಡಲೆ ನಾಜಮ್ಮಸಾಹೇಬರನ್ನು ಕರೆದು ತಮ್ಮೆದುರಿನಲ್ಲಿಯೇ ಸದಾಖತ್ ನಾಮಾ ಬರೆಸಿ ಆ ಕಾಗದವನ್ನು ನನ್ನ ಕೈಯಲ್ಲಿ ಕೊಡಿಸಿ ಸನ್ಮಾನಿಸಿ ಕಳುಹಿಸಿದರು. ಆ ಮೇಲೆ ೧೦-೧೨ ದಿವಸಗಳ ನಂತರ ಚಾರ ಮಿನಾರ ಹತ್ತರ ಮೋಟಾರ ಸ್ವಾರಿಯಾಗಿ ಬರುತ್ತಿದ್ದರು. ನಾನೂ ಎದುರಿಗೆ ಹೋದೆನು. ನನ್ನನ್ನು ಕಂಡು ಮೋಟಾರು ನಿಲ್ಲಿಸಿ ಕ್ಷೇಮ ಸಮಾಚಾರಗ ಳನ್ನು ವಿಚಾರಿಸಿ ಕಾಲೇಜದಲ್ಲಿ ಷರೀಕು ಆದಿರೋ, ಎಂದು ಕೇಳಿದರು. ಅಂದ ಬಳಿಕ ಇವರ ಜ್ಞಾಪಕಶಕ್ತಿ! ಎಂತಹದು ಓದುಗರು ತಾವೇ ವಿಚಾರ ಮಾಡಬಹುದು.


ಈಗಿನ ದೊರೆಗಳು ಅನೇಕಸಲ ಪರದೇಶಕ್ಕೆ ಪ್ರಯಾಣ ಬೆಳಿಸಿ ವಾಸಿಸಿ ಅಲ್ಲಿಯ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಬಂದವರಿದ್ದಾರೆ. ಮತ್ತು ಸನ್ ೧೯೧೨ನೆಯ ಇಸ್ವಿಯಿಂದ ೧೯೧೪ರ ವರೆಗೆ ಇವರು ಹೈದರಾಬಾದ ಸಂಸ್ಥಾನದ ಮುಖ್ಯ ಮಂತ್ರಿಗಳಾಗಿದ್ದು ಹೆಸರುವಾಸಿಯಾಗಿದ್ದಾರೆ.

ಸರ್ ಸಾಲಾರಜಂಗರವರಿಗೆ ಸಿಟ್ಟೆನ್ನುವದೇ ಗೊತ್ತಿಲ್ಲ. ಕೇವಲ ಹರ ಕಂಗಿಯ ಬಡ ರೈತನಿಗೂ ಕೂಡ ತಮ್ಮ ದರ್ಶನ ಕೊಡುತ್ತಾರೆ. ರೈತರ ಹಿತಕ್ಕಾಗಿ ಮಾಡುವ ವಿಚಾರಗಳಲ್ಲಿಯೇ ಹಗಲಿರುಳು ಇರುತ್ತಾರೆ. ದಾನ ಧರ್ಮ ಕೊಡುವದರಲ್ಲಂತೂ, ಇವರು ಆಧುನಿಕ ಕರ್ಣರೆಂದೆನಿಸಿಕೊಂಡಿರು ತ್ತಾರೆ. ಸಾವಿರಾರು ಬಡರೈತರ ಹಿತಕ್ಕಾಗಿ ಬಹು ವಿಧವಾಗಿ ಸಹಾಯ ಮಾಡಿದ್ದಾರೆ. ಇವರ ಅರಮನೆಯ ಮುಂದೆ ವಿದ್ಯಾರ್ಥಿಗಳು ಗುಂಪು ಗುಂಪಾಗಿ ನಿಂತಿರುವದನ್ನು ಬೇಕಾದಾಗ ಕಾಣಬಹುದಾಗಿದೆ. ಅಲೀಗಡ ದಲ್ಲಿ, ಮುಂಬೈ, ಮದ್ರಾಸ, ಬಂಗಾಲ, ಇಂಗ್ಲಂಡ, ಜರ್ಮನಿ, ಅಮೇರಿಕಾ ಮೊದಲಾದವುಗಳಲ್ಲಿ ಸರ್ ಸಾಲಾರಜಂಗ ಬಹದ್ದೂರರವರ ಸಹಾಯದಿಂದ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳನ್ನು ನೋಡಬಹುದು. ಮಹಾರಾಜಾ

ಸರ್ ಕಿಸನ್ ಪ್ರಸಾದರು "ವಿದ್ಯಾರ್ಥಿಗಳ ರಾಜಾ" ಎಂದು ಹೆಸರಾಗಿದ್ದಾರೆ. ನಮ್ಮ ಸರ್ ಸಾಲಾರಜಂಗ ಬಹದ್ದೂರರವರು "ವಿದ್ಯಾರ್ಥಿಗಳ ತಾಯಿತಂದೆ" ಗಳೆಂದು ಹೆಸರಾಗಿದ್ದಾರೆ.

ದೇವರು ನಮ್ಮ ಸರ್ ಸಾಲಾರಜಂಗ ಬಹದ್ದೂರರವರಿಗೆ ಆಯುಸ್ಯ, ಆರೋಗ್ಯವಿತ್ತು ಸಲಹಲಿ. ನಮ್ಮ ಮೇಲೆ ಸದಾ ಅವರ ಕೃಪಾಛತ್ರವಿರಲಿ. ಅವರಿಗೆ ಸೂರ್ಯನು ತೇಜಸ್ಸು ಕೊಡಲ, ಚಂದ್ರನು ಕೀರ್ತಿಯನ್ನು ಹೆಚ್ಚಿಸಲಿ. ಮಂಗಳನು ಸೌಭಾಗ್ಯವನ್ನೀಯಲಿ. ಬುಧನು ಸೌಂದರ್ಯ ಹೆಚ್ಚಿಸಲಿ. ಗುರುವು ಜ್ಞಾನವನ್ನು ಹೆಚ್ಚಿಸಲಿ. ಶುಕ್ರನು ರಾಜ ನೀತಿಯನ್ನು ದಯಪಾಲಿಸಲಿ. ಶನಿಯು ಸೌಖ್ಯವನ್ನು ಕೊಡಲಿ. ರಾಹುವು ಬಾಹುಬಲವನ್ನೂ, ಕೇತುವು ಉನ್ನತಿಯನ್ನೂ ದಯಪಾಲಿಸಲಿ. ಸರಸ್ವತಿಯು ವಾಕ್ಚಾತುರ್ಯವನ್ನೂ, ಲಕ್ಷ್ಮಿಯು ಅತುಳೈಶ್ವರ್ಯವನ್ನೂ ಅನುಗ್ರಹಿಸಲೆಂದು ಜಗದೀಶನನ್ನು ಪ್ರಾರ್ಥಿಸುತ್ತೇನೆ.

# ★ ಜಾಗೀರಿಯ ಪರಿಚಯ ★



ಕೊಪ್ಪಳದ ಪೋಲೀಸ ಸುಪರಿಂಟೆಂಡಂಟರ ಕಚೇರಿಯ ಆನಾವರಣ ಸಮಾರಂಭದ ದಿವಸ ತೆಗೆದ ಭಾವಚಿತ್ರ.
೧೩೪೪ ಫಸಲಿ.

# ಜಾಗೀರಿಯ ಪರಿಚಯ.

**ನವಾಬ** ಸರ್ ಸಾಲಾರಜಂಗ ಬಹದ್ದೂರರವರ ಮನೆತನವು ಹೇಗೆ ಸುಪ್ರಸಿದ್ಧವಾಗಿರುವದೋ, ಹಾಗೆಯೇ ಅವರ ಜಾಗೀರಿ ಜಿಲ್ಹೆಗಳು ಪ್ರಾಚೀನ ಕಾಲದಿಂದ ಪ್ರಸಿದ್ಧವಾಗಿರುವವು. ದುಂದಗಲ್ಲ ಜಿಲ್ಹೆಯಲ್ಲಿ "ಅಜೆಂಟಾ"ದ ಪರಿಚಯವಿಲ್ಲದವರು ಅತಿ ವಿರಳವೆಂದೇ ಹೇಳಬಹುದು.

ಕೊಪ್ಪಳ ಕಿಲ್ಲೆಯಂತೂ ಸುಪ್ರಸಿದ್ಧವಾಗಿದ್ದು ಪಾಂಡುಪುತ್ರನಾದ **ಅರ್ಜುನನು** ತಪಸ್ಸುಮಾಡಿ, **ಪಾಶುಪತಾಸ್ತ್ರ** ಪಡೆದ **ಇಂದ್ರಕೀಲ** ಪರ್ವತವೇ ಇದಾಗಿರುವದು. ಕುಕನೂರು, ಇಟಗಿ, ಮುನಿರಾಬಾದ, ಶಿವಪುರ, ಮೊದಲಾದ ಸ್ಥಳಗಳಲ್ಲಿಯ ಪುಣ್ಯಸ್ಥಾನಗಳು ಈ ಜಿಲ್ಹೆಯಲ್ಲಿರುವವು. ಅಂತೇ ಈ ಕೊಪ್ಪಳದ ವರ್ಣನೆಯನ್ನು ಷಡಕ್ಷರ ಕವಿಯು ಹೀಗೆ ಮಾಡಿದ್ದಾನೆ. ಯೋಗಿಗಳ ಮುತ್ತು ವೀರವೃಂದದ ಬೀಡು | ಬೊಕ್ಕಸದ ಕಣಜವೈ ವಿದ್ವತ್ತೆಗಳಕಾಡು | ಕನ್ನಡಿಗರ ಸದಭಿಮಾನದನಾಡು | ನೃಪತುಂಗನುದಿಸಿದ ತಾಯ್ನಾಡು | ಇತ್ಯಾದಿ. ಇತ್ಯಾದಿ. ಉಪಮೆಗಳಿಂದ ಕೊಂಡಾಡಿರುವನು. ಅಲ್ಲದೆ ಕೊಪ್ಪಳಕ್ಕೆ ಮೊದಲು "**ಕೋಪಣನಗರ**" ವೆಂತಲೂ "**ತೊಪ್ಪಲ**" ವೆಂತಲೂ ಕರೆಯುತ್ತಿದ್ದರೆಂದು ಇತಿಹಾಸದಿಂದ ಗೊತ್ತಾಗುತ್ತದೆ. ೧೬ನೆಯ ಶತಮಾನದಲ್ಲಿ ಕೊಪ್ಪಳವು ಆನೇಗುಂದಿ ನರಪತಿಯ ವಶದಲ್ಲಿ ಆ ಮೇಲೆ ಆದಿಲ್ ಶಾಹಿಯವರ ವಶದಲ್ಲಿ ನಂತರ ಮಹಾರಾಷ್ಟ್ರರ ವಶದಲ್ಲಿ ತರುವಾಯ ಮೈಸೂರು ಹುಲಿಯಾದ ಟೀಪುವಿನ ವಶದಲ್ಲಿ ಇತ್ತೆಂದು ತಿಳಿಯುತ್ತದೆ. ಕೊಪ್ಪಳಕೋಟೆಯ ಅಗಸೆಯ ಲಿಪಿಗಳಿಂದ "ಟೀಪುವಿನ ಕಾಲಕ್ಕೆ ಸುಲ್ತಾನಗಡ" ವೆಂತಲೂ, ನಿಜಾಮ ಬಾದಶಹರ ವಶವಾದಂದಿನಿಂದ "ನಿಜಾಮಗಡ" ಉರ್ಫ "ಕೊಪ್ಪಳ" ವೆಂತಲೂ ಪದಗಳುಂಟಾದವೆಂದು ಧಾರಾಳವಾಗಿ ಹೇಳಬಹುದಾಗಿದೆ. ಇದೇ ನಿಜಾಮಗಡವು ಕ್ರಿ. ಶ. ೧೮೫೩ ರಲ್ಲಿ ಇಂಗ್ಲಿಷರ ವಶದಲ್ಲಿ, ೧೮೫೮ ರಲ್ಲಿ ಮುಂಡರಗಿ ಭೀಮರಾಯರ ಆಡಳಿತೆಯಲ್ಲಿದ್ದು ಪುನಃ ಕ್ರಿ. ಶ. ೧೮೬೦ ರಲ್ಲಿ ನಿಜಾಮ ಸರಕಾರದ ಅಂಕಿತದಲ್ಲಿ ೧೮೬೧ ರಲ್ಲಿ ನವಾಬ ಸರ್ ಸಾಲಾರ

ಜಂಗ ಬಹದ್ದೂರರ ವಶಕ್ಕೆ ಬಂದು ಜಾಗೀರಿಯಾಯಿತೆಂದು ಗೊತ್ತಾಗುತ್ತದೆ. ಈ ಜಾಗೀರಿಯ ಕ್ಷೇತ್ರಫಲವು ೧೪೪೦ ಮೈಲು ಚಚ್ಚೌಕು ಇದ್ದು ಜನಸಂಖ್ಯೆ ಮೂರು ಲಕ್ಷ ಇರುವದು. ಉತ್ಪನ್ನವು ೧೬ ಲಕ್ಷ ಇದೆ. ಎರಡು ಜಿಲ್ಹೆಗಳೂ, ಏಳು ತಾಲೂಕುಗಳೂ, ೩೨೫ ಹಳ್ಳಿಗಳೂ, ಇರುತ್ತವೆ.

## ಭಾಷಾ ಪರಿಚಯ.

ಕೊಪ್ಪಳ ಜಿಲ್ಹೆಯಲ್ಲಿ ಕನ್ನಡಿಗರು ವಿಶೇಷವಿದ್ದು ಅವರ ಮಾತೃ ಭಾಷೆಯು ಕನ್ನಡವಾಗಿದೆ. ಕನ್ನಡ ಮತ್ತು ಉರ್ದು ಮಾತಾಡುತ್ತಿರುವರು. ದುಂದಗಲ್ ಜಿಲ್ಹೆಯಲ್ಲಿ ಆಂಧ್ರ ಭಾಷೆ ವಿಶೇಷವಾಗಿದ್ದು, ತೆಲಗು ಮಾತಾಡುವವರೇ ಅಧಿಕವಾಗಿರುವರು. ವರ್ತಕರು ಅಲ್ಪ ಸ್ವಲ್ಪ ಕನ್ನಡ ಮಾತುಗಳನ್ನಾಡುವರು. ಎರಡೂ ಜಿಲ್ಹೆಗಳಲ್ಲಿ ರಾಜಕೀಯ ಭಾಷೆಯು ಉರ್ದು ಇದ್ದು ಇತ್ತೀಚೆಗೆ ಇಂಗ್ಲಿಷು ಪ್ರಚಾರದಲ್ಲಿ ಬಂದಿರುವದು.

## ಆಡಳಿತೆ.

ಹೈದರಾಬಾದ ಸಂಸ್ಥಾನದಲ್ಲಿ ೩೦ ಸಾವಿರ ಮೊದಲು ಮಾಡಿ ೨೦ ಲಕ್ಷ ವಾರ್ಷಿಕ ಉತ್ಪನ್ನವುಳ್ಳ ಸಂಸ್ಥಾನಗಳೂ ಜಾಹಗೀರಗಳೂ ಒಟ್ಟು ೨೭ ಇರುತ್ತವೆ. ಇವುಗಳಲ್ಲಿ ಕೆಲವು ಸ್ವತಂತ್ರ ಜಾಹಗೀರುಗಳೂ, ಸಂಸ್ಥಾನಗಳೂ ಇರುತ್ತವೆ. ಇವುಗಳ ಒಳ ಆಡಳಿತೆಯಲ್ಲಿ ನಿಜಾಮ ಸರಕಾರದವರು ಕೈಹಾಕುವದಿಲ್ಲ. ಇಂಥ ಸ್ವತಂತ್ರ ಸಂಸ್ಥಾನ ಮತ್ತು ಜಾಹಗೀರುಗಳಲ್ಲಿ ನವಾಬ ಸರ್ ಸಾಲಾರಜಂಗ ಬಹದ್ದೂರರವರ ಜಾಗೀರಿಯು ಒಂದಾಗಿರುವದು

ನಮ್ಮ ನವಾಬ ಸಾಲಾರಜಂಗ ಬಹದ್ದೂರರವರ ಜಾಗೀರಿಯ ಸೆಕ್ರೆಟರಿಗಳೇ ಜಾಹಗೀರಿಯ ಮುಖ್ಯಾಧಿಕಾರಿಗಳಾಗಿದ್ದು ಇವರು ದಿವಾಣರಂತೆ ಸರ್ವಾಧಿಕಾರಿಗಳಾಗಿರುತ್ತಾರೆ. ಇವರಿಗೆ ಪ್ರತಿ ತಿಂಗಳು ೬೦೦ ರೂಪಾಯಿ ಪಗಾರ ವಿರುತ್ತದೆ. ಈಗಿನ ಸೆಕ್ರೆಟರಿಗಳು **ಮೌಲ್ವಿ ಮೀರ ಅಸಗರ ಅಲೀ ಸಾಹೇಬರಿದ್ದಾರೆ.** ಇವರು ತಮ್ಮ ಸಹಕಾರಿಗಳಾದ ಅಧಿಕಾರಸ್ಥರೊಂದಿಗೆ

ಜನಹಿತದ ಹಲವು ಸುಧಾರಣೆಗಳನ್ನು ಕೈಕೊಂಡಿರುವರು. ಇವರು ನುರಿತ ಅಧಿಕಾರಿಗಳಿದ್ದು ಸಾದಾ ಜೀವಿಗಳೂ, ಸರಳ ಸ್ವಭಾವದವರೂ ಇರುವರು. ಇವರ ಮುಖಾಂತರ ಜಾಗೀರಿಯ ಉತ್ಕರ್ಷವು ನ್ಯೂನತೆಯ ಶಿಖರಕ್ಕೆ ಮುಟ್ಟಿ ಪ್ರಜೆಗಳ ಆಶೆ ಆಕಾಂಕ್ಷೆಗಳು ಈಡೇರಲಿ. ಜಾಗೀರಿಯು ಹಿಂದುಸ್ತಾನದಲ್ಲಿ ಪ್ರಗತಿ ಪಥವನ್ನು ಕಾಣಲಿ. ಜಗತ್ತಿನಲ್ಲಿ ಸ್ವಾತಂತ್ರ್ಯ ಅಭಿಮಾನದಿಂದ ಬೆಳಗಲಿ ಎಂದು ಜಗತಿಯನ್ನೇ ಪ್ರಾರ್ಥಿಸುವ.

## ಕಂದಾಯಖಾತೆ.

ಕಂದಾಯಖಾತೆಯ ಉತ್ಪನ್ನವು ಸುಮಾರು ೮ ಲಕ್ಷ ರೂಪಾಯಿ ಇರುತ್ತದೆ. ಈ ಖಾತೆಯ ಮುಖ್ಯಾಧಿಕಾರಿಗಳು ಜಹಗೀರಿ ಸೆಕ್ರೆಟರಿಗಳೇ ಇದ್ದಾರೆ. ಇವರಿಗೆ " **ನಾಜಮ್ಮ ಮಾಲ** " ಎನ್ನುತ್ತಾರೆ. ಇವರು ಪ್ರಜೆಗಳ ಬೇಡಿಕೆಗಳನ್ನು ಪೂರೈಸಿ ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿದ್ದಾರೆ.

## ಎರಡು ಜಿಲ್ಹೆಗಳೂ ಇಬ್ಬರು ಕಲೆಕ್ಟರರು.

(೧) ದುಂದಗಲ್ಲ ಜಿಲ್ಹೆಯ ಕಲೆಕ್ಟರರು:-- **ಮೌಲ್ವಿ ಷುಜಾಅತ್ ಅಲೀಖಾನ ಸಾಹೇಬರು** ಇಂಗ್ಲಿಷ ಬರಹದಲ್ಲಿ ಬಲ್ಲಿದರೂ ಗೊತ್ತುಮಾಡಿದ ವೇಳೆಗೆ ಸರಿಯಾಗಿ ಕಚೇರಿಗೆ ಹೋಗುವವರೂ ನಿಷ್ಪಕ್ಷಪಾತಿಗಳೂ ರೈತರ ಹಿತವೇ ತಮ್ಮ ಹಿತವೆಂದು ಕೆಲಸ ಮಾಡುವವರೂ ಆಗಿದ್ದಾರೆ.

(೨) ಕೊಪ್ಪಳ ಜಿಲ್ಹೆಯ ಕಲೆಕ್ಟರರು :— **ಮಿ॥ ವೆಂಕೋಬ ರಾಯರು** ಇವರಿಗೆ ಬಹುಜನಗಳು " ಅಡಿವಿ ರಾಯ " ರೆಂದೆನ್ನುತ್ತಾರೆ. ತಿಳಿಗನ್ನಡಿಗರಾದ ನಮ್ಮ ವೆಂಕೋಬರಾಯರು ಮಾತೃಭೂಮಿಯ ಸೇವೆಗಾಗಿ ಕಲೆಕ್ಟರ ಪದವಿಯನ್ನು ಹೊಂದಿ ಕೊಪ್ಪಳಕ್ಕೆ ಬಂದವರೆಂದರೆ ಇವರೇ ಮೊದಲಿನವರೆಂದು ಧಾರಾಳವಾಗಿ ಹೇಳಬಹುದು. ಇವರು ದುಂದಗಲ್ಲ ಜಿಲ್ಹೆಯಲ್ಲಿ ಜನಹಿತದ ಕೆಲವು ಸುಧಾರಣೆಗಳನ್ನು ಆಸ್ಥೆಯಿಂದಲೂ ಸಾಹಸದಿಂದಲೂ ಮಾಡಿದ್ದಕ್ಕಾಗಿ ಅಲ್ಲಿಯ ರೈತರು ಇವರಿಗೆ ಮಾನಪತ್ರಗಳನ್ನು ಅರ್ಪಿಸಿರುತ್ತಾರೆ. ಕೊಪ್ಪಳದ ನಾಗರಿಕರು ಬಯಸುತ್ತಿದ್ದ ಹೆಣ್ಣುಮಕ್ಕಳ

( ಗರ್ಲಸ್ಕೂಲು ) ಶಾಲೆಯನ್ನು ಸ್ಥಾಪಿಸಿದರಲ್ಲದೆ ಆಂಗ್ಲಭಾಷೆಗೆ ತಕ್ಕ ಅನುಕೂಲವನ್ನೂ ಹೈಸ್ಕೂಲನ್ನೂ ಸ್ಥಾಪಿಸಿದರು. ಇವರು ಬರುವದಕ್ಕಿಂತ ಮೊದಲಿದ್ದ ಕಲೆಕ್ಟರರಾದ ಅಬ್ದುಲ್‌ಖದೀರಸಾಹೇಬರ ಕಾಲದಲ್ಲಿ ಕೊಪ್ಪಳದಿಂದ ಗದುಗಿನವರೆಗೆ ಮೋಟಾರ ಮಾರ್ಗ, ಜ್ಯುಬಿಲೀ ಪಾರ್ಕ, ಕ್ಲಾಕ್ ಟಾವರ, ಅಲ್ಲದೆ ಹುಡುಗರಿಗೆ ಬೈಲಲ್ಲಿ ವ್ಯಾಯಾಮ ಮಾಡಲು ಅನುಕೂಲವೂ ಉಪಕರಣಗಳೂ ಏರ್ಪಡಿಸಲ್ಪಟ್ಟಿದ್ದವು. ನಾಗರಿಕರಿಗಾಗಿ ಕ್ಲಬ್ಬಿನ ಕಟ್ಟಡ ಪ್ರಾರಂಭವಾಗಿತ್ತು. ಆ ಕೆಲಸವು ವೆಂಕೋಬರಾಯರಿಂದ ಮುಗಿಸಲ್ಪಟ್ಟಿತು. ೧೯೩೯ನೆಯ ಇಸ್ವಿ ಜನವರಿ ತಿಂಗಳ ೨೨ನೆಯ ತಾರೀಖಿನ ದಿವಸ ಕ್ಲಬ್ಬಿಗೆ ಸಂಬಂಧಪಟ್ಟ ಅನಾವರಣ ಸಮಾರಂಭವು ನಿಜಾಮ ಸರಕಾರದ ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ **ಮಿ॥ ಮುಹಮ್ಮದ ಹುಸೇನಸಾಹೇಬರ** ನೇತೃತ್ವದಲ್ಲಿ ಜಾಹಗೀರಿ ಸೆಕ್ರೆಟರಿಗಳ ಹಸ್ತದಿಂದ ಜರುಗಿತು. ಕಲೆಕ್ಟರರಿಗೆ **ತಾಲೂಕದಾರ**ರೆನ್ನುತ್ತಾರೆ. ಇವರ ಪಗಾರ ತಿಂಗಳೊಂದಕ್ಕೆ ೪೦೦ ರೂ. ಇರುತ್ತದೆ.

## ತಹಶೀಲದಾರ ಕಚೇರಿಗಳು (ಏಳು)

೧. ದುಂದಗಲ್ಲ ಜಿಲ್ಹೆಯಲ್ಲಿ ಅಜೆಂಟಾ, ರಾಯಗಿರಿ, ಕೋಸಗಿ ಮೀರಸಾಗರ, ದುಂದಗಲ್ಲ ಈ ಐದೂ ಸ್ಥಳಗಳಲ್ಲಿ ತಹಶೀಲದಾರ ಕಚೇರಿಗಳಿದ್ದು ಐದು ತಾಲೂಕುಗಳು ಇರುತ್ತವೆ.

೨. ಕೊಪ್ಪಳ ಜಿಲ್ಹೆಯಲ್ಲಿ ಯಲಬುರ್ಗಾ, ಕೊಪ್ಪಳ, ಹೀಗೆ ಎರಡು ಸ್ಥಳಗಳಲ್ಲಿ ಕಚೇರಿಗಳಿದ್ದು ಎರಡು ತಾಲೂಕುಗಳಿರುತ್ತವೆ.

ತಾಲೂಕಿನ ಅಧಿಕಾರಿಗಳಿಗೆ ತಹಶೀಲದಾರ (ಮಾಮುಲೇದಾರ) ರೆನ್ನುತ್ತಾರೆ. ಇವರಿಗೆ ತಿಂಗಳೊಂದಕ್ಕೆ ೫೦ ರಿಂದ ೧೦೦ ರೂ. ಪಗಾರವಿರುತ್ತದೆ. ಕೆಲವು ತಹಶೀಲದಾರರಿಗೆ ದಿವಾಣೀ ಫೌಜದಾರಿ ಅಧಿಕಾರಗಳು ಇರುತ್ತವೆ. ಇವರಿಗೆ ೨೦೦ ಪಗಾರ ಇರುತ್ತದೆ.

ಕೊಪ್ಪಳ ತಾಲೂಕಿಗೆ **ಮಿ॥ ಮೀರಫರವರಿಷ್ ಅಲೀಸಾಹೇಬರು** ತಹಶೀಲದಾರರಾಗಿ ಬಂದಿದ್ದಾರೆ. ಇವರಿಗೆ ನಮ್ಮ ಭವಿಷ್ಯದ ಪ್ರಕಾರ

ತಹಶೀಲದಾರರ ಹುದ್ದೆ (ಮುಸ್ತ ಖಿಲ್) ಖಾಯಂ ಆಗಿರುತ್ತದೆ. ಇವರು ತರುಣರೂ ಉತ್ಸಾಹಿಗಳೂ ಇಂಗ್ಲಿಷ ಬರಹದಲ್ಲಿ ಬಲ್ಲಿದರೂ ರೈತರ ಹಿತಕ್ಕಾಗಿ ದುಡಿಯುವವರೂ, ಹರಿಜನರ ಏಳ್ಗೆಗಾಗಿ ಉತ್ಕಟೇಚ್ಛೆಯುಳ್ಳವರೂ ವಿದ್ಯಾವಂತರಲ್ಲಿ ಪ್ರೇಮಿಗಳೂ ಆಗಿದ್ದಾರೆ.

ಯಲಬುರ್ಗಾ ತಾಲೂಕಿಗೆ **ಮಿ|| ಮೊಹದೀ ಹುಸೇನ ಸಾಹೇಬರು** ತಹಶೀಲದಾರರಾಗಿದ್ದು ಇವರು ಅಲೀಗಡ ವಿಶ್ವವಿದ್ಯಾಲಯದ ಬಿ. ಎ. ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಪಾಸಾಗಿದ್ದು ಎಷ್ಟೋ ಸುಧಾರಣೆಗಳನ್ನು ಮಾಡಿದ್ದರಿಂದ ಈಗ ದುಂದಗಲ್ಲಿಗೆ ಮುನಸೂಫರಾಗಿ ಹೋಗಿದ್ದಾರೆ. ಈ ಸ್ಥಳಕ್ಕೆ **ಮಿ|| ಸೈಯ್ಯದ ಮಹಮೂದ ರಜಾ** ಬಿ. ಎ. ಎಲ್. ಎಲ್. ಬಿ. ಅವರ ನೇಮಣೂಕ ಆಗಿದ್ದು ಇವರು ಸ್ವಲ್ಪೇ ದಿನಗಳಲ್ಲಿ ಯಲಬುರ್ಗಾ ತಾಲೂಕಿನ ರೈತರಿಗೆ ಬೇಕಾಗಿ ಕೀರ್ತಿಶಾಲಿಗಳಾಗಿರುವರು.

## ಅಬಕಾರಿ ಖಾತೆ.

ಇಸ್ವಿ ಸನ್ ೧೯೩೭ರ ವರೆಗೆ ಹೆಂಡ, ಸರಾಯಿ, ಗಾಂಜಾ, ಅಫೀಮು, ಮಾರಲಿಕ್ಕೆ ಗುತ್ತೇ ಕೊಡುವದು, ಲಿಲಾವು ಮಾಡುವದು, ಜಾಗೀರಿಯ ಅಧಿಕಾರಿಗಳೇ ಮಾಡುತ್ತಿದ್ದರು. ೧೯೩೭ನೆಯ ಇಸ್ವಿಯಿಂದ ನಿಜಾಮು ಸರಕಾರದ ಅಧಿಕಾರಿಗಳೂ ಜಾಗೀರಿ ಅಧಿಕಾರಿಗಳೂ ಕೂಡಿಯೇ ಮಾಡುತ್ತಾರೆ. ನಿಜಾಮು ಸರಕಾರದವರು ಜಿಲ್ಲೆಗೆ ೪ ಜನ ಇನಸ್ಪೆಕ್ಟರರನ್ನು ನೇಮಿಸಿ ತಾವೇ ಈ ಖಾತೆಯ ಮೇಲ್ವಿಚಾರಣೆಯನ್ನು ಮಾಡುತ್ತಾರೆ. ಮೇಲ್ವಿಚಾರಣೆಯ ವೆಚ್ಚಕ್ಕಾಗಿ ಜಾಗೀರಿಯ ಸರಕಾರಕ್ಕೆ ಸಲ್ಲುವ ಹಣದಲ್ಲಿ ೧೦೦ಕ್ಕೆ ಮೂರರಂತೆ ವಜಾ ಮಾಡಿಕೊಳ್ಳುತ್ತಾರೆ. ಅಬಕಾರಿ ಖಾತೆಯಿಂದ ಜಾಗೀರಿ ಸರಕಾರಕ್ಕೆ ೧ ಲಕ್ಷ ರೂಪಾಯಿ ಆದಾಯ ಇರುತ್ತದೆ.

## ಬಂದೋಬಸ್ತ (ಸರ್ವೇ) ಖಾತೆ.

ಈ ಖಾತೆಯ ಮುಖ್ಯಾಧಿಕಾರಿಗಳಾದ **ಮಿ|| ದಾದಾಭಾಯಿ** ಎಂಬ ಫಾರ್ಸಿ ಸದ್ಗೃಹಸ್ಥರಿದ್ದು ಇವರು ನ್ಯಾಯವಂತರೂ, ಸರಳ ಸ್ವಭಾವದ

ವರೂ, ಸಂಪೂರ್ಣ ಮನವರಿಕೆ ಮಾಡಿಕೊಂಡು ಮುಂದೆ ಬಂದು ಕೆಲಸ ಪೂರ್ತಿ ಮಾಡುವವರೂ ಆಗಿದ್ದಾರೆ. ಇವರಿಗೆ ಪ್ರತಿ ತಿಂಗಳು ೪೬೫ ರೂ. ಪಗಾರ ಇರುತ್ತದೆ. ಈ ಖಾತೆಗೆ ಪ್ರತಿ ವರ್ಷ ನಾಲ್ವತ್ತು ಸಾವಿರ ವೆಚ್ಚವೂ ಬರುತ್ತದೆ.

ಈ ಖಾತೆಯವರು ಹೊಲ, ಮನೆ, ಊರುಗಳ ಸರ್ವೇ ಮಾಡುತ್ತಾರೆ. ಕೊಪ್ಪಳ ತಾಲೂಕಿನ ಹಳ್ಳಿಗಳ ಸರ್ವೇ ಮುಗಿಸಿದ್ದಾರೆ. ಕೊಪ್ಪಳ ದುಂದಗಲ್ಲ ಜಿಲ್ಹೆಗಳ ನಕಾಶವೂ ಸಿದ್ಧವಾಗಿವೆ. ನಕಾಶಗಳು ಉರ್ದು ಭಾಷೆಯಲ್ಲಿ ಮುದ್ರಣವಾಗಿವೆ.

## ನ್ಯಾಯಾಧೀಶ ಕೋರ್ಟುಗಳು.

ಜಾಗೀರಿಯಲ್ಲಿ ನ್ಯಾಯಾಧೀಶರ ಐದು ಕೋರ್ಟುಗಳಿರುತ್ತವೆ. ಸೆಶನ್ ಕೋರ್ಟು ಹೈದರಾಬಾದದಿಂದ ೧೨ ಮೈಲಿನ ಮೇಲೆ ಸರೂನಗರದಲ್ಲಿ ಇರುತ್ತದೆ. ಸೆಶನ್ ಜಜ್ಜರು ಈ ಮೊದಲು ಕೊಪ್ಪಳ ಜಿಲ್ಹೆಯ ಕಲೆಕ್ಟರರಾಗಿದ್ದ **ಮೌಲ್ವಿ ಮೀರ ಸೈಯ್ಯದ ಅಬ್ದುಲ್ ಖದೀರಸಾಹೇಬರ** ನೇಮಣೂಕವಾಗಿರುತ್ತದೆ. ಇವರಿಗೆ ತಿಂಗಳೊಂದಕ್ಕೆ ೬೦೦ ರೂ. ಪಗಾರ ಇರುತ್ತದೆ. ಇವರು ಸೆಶನ್ ಕಮಿಟ್ ಆದ ಖಟ್ಲೆಗಳ ವಿಮರ್ಶೆ ಮಾಡಿ ತೀರ್ಪು ಕೊಡುತ್ತಾರೆ. ದುಂದಗಲ್ ಜಿಲ್ಹೆಯ ಸೆಷನ್ ಕಮಿಟ್ ಖಟ್ಲೆಗಳ ತೀರ್ಪು ಸರೂನಗರದಲ್ಲಿಯೇ ತಮ್ಮ ಕಚೇರಿಯಲ್ಲಿ ವಿಚಾರ ಮಾಡಿ ಠರಾವು ಬರೆಯುತ್ತಾರೆ. ಕೊಪ್ಪಳ ಜಿಲ್ಹೆಯ ಸೆಷನ್ ಖಟ್ಲೆಗಳ ವಿಚಾರಣೆಯನ್ನು ಕೊಪ್ಪಳಕ್ಕೆ ಬಂದು, ಇಲ್ಲಿಯೇ ಖಟ್ಲೆಗಳ ವಿಮರ್ಶೆ ಮಾಡಿ ತೀರ್ಪು ಹೇಳುತ್ತಾರೆ. ಈ ಸೆಷನ್ ಜಜ್ಜರ ತೀರ್ಪಿನ ಮೇಲೆ, ಹೈದರಾಬಾದ ಹೈಕೋರ್ಟಿಗೆ ಅಪೀಲು ಮಾಡಲು ಮುಕ್ತಾದ್ವಾರ ಇರುತ್ತದೆ.

## ಸಬ್ ರಜಿಷ್ಟ್ರೇಶನ್

ಸಬ್ ರಜಿಷ್ಟ್ರರ ಅಧಿಕಾರವನ್ನು ಜಾಹಗೀರಿಯ (ನ್ಯಾಯಾಧೀಶ) ಮುನಸೂಫರಿಗೆ ಕೊಡಲಾಗಿದೆ. ಯಲಬುರ್ಗಾ ತಾಲೂಕಿನಲ್ಲಿ ಮುನಸೂಫ

ಕೋರ್ಟ ಇಲ್ಲದ್ದರಿಂದ, ತಹಶೀಲದಾರ ಸಾಹೇಬರ ಕಡೆಗೆ ಸಬ್‌ರಜಿಸ್ಟ್ರರ ಅಧಿಕಾರವನ್ನು ಒಪ್ಪಿಸಲಾಗಿದೆ. ಕೊಪ್ಪಳದ ಸಬ್‌ರಜಿಷ್ಟ್ರಾರ ಅಧಿಕಾರವನ್ನು ನ್ಯಾಯಾಧೀಶ ಕೋರ್ಟಿನ ಅಧಿಕಾರಿಗಳಾದ **ಮಿ|| ಮೌಲ್ವಿ ಮಿೂರ ಸೈಯ್ಯದ ಅಹಮ್ಮದ ಅಲೀಖಾನ** ಸಾಹೇಬರಿಗೆ ಕೊಡಲಾಗಿದೆ. ಇವರಿಗೆ ಜೇಲಿನ ಸುಪರಿಂಟೆಂಡೆಂಟ ಅಧಿಕಾರವೂ ಇರುತ್ತದೆ. ಇವರು ನಿಷ್ಪಕ್ಷಪಾತಿಗಳೂ, ದಯಾಮಯ ಗುಣಯುತರೂ, ಇಂಗ್ಲಿಷ ಬಹದಲ್ಲಿ ಬಲ್ಲಿದರೂ, ಗೊತ್ತು ಮಾಡಿದ ವೇಳೆಗೆ ನ್ಯಾಯಾಧೀಶ ಕೋರ್ಟಿಗೆ ದಯಮಾಡಿಸಿ ನ್ಯಾಯದಂತೆ ತೀರ್ಪು ಕೊಡುವವರೂ, ನಿಗರ್ವಿಗಳೂ ಆಗಿದ್ದಾರೆ. ಚಾಡಿ ಇವರಿಗೆ ಸೇರದೆಂದು ಧಾರಾಳವಾಗಿ ಹೇಳಬಹುದು.

## ಪೋಲಿಸ ಖಾತೆ.

ಜಾಹಗೀರಿಯಲ್ಲಿ ಪೋಲೀಸ ಸುಪರಿಂಟೆಂಡೆಂಟರ ಕಚೇರಿಯು ಕೊಪ್ಪಳದಲ್ಲಿ ಇರುತ್ತದೆ. ಈಗಿದ್ದ ಪೋಲಿಸ ಸುಪರಿಂಟೆಂಡೆಂಟರು (ಮುರುಷದ್ ಘರಾನಾ,) ಗುರುಮನೆತನದ **ಮೌಲ್ವಿ ಮಿೂರ ಸೈಯ್ಯದ ಅಬ್ದುಲ್ ಹೈ** ಸಾಹೇಬರಿರುತ್ತಾರೆ. ಇವರು ನಿಜಾಮು ಸರಕಾರದ ದೊಡ್ಡ ದೊಡ್ಡ ನಗರಗಳಲ್ಲಿ ಪೋಲೀಸ ಸುಪರಿಂಟೆಂಡೆಂಟರಾಗಿ ೩೦ ವರ್ಷ ಕೆಲಸ ಮಾಡಿ ಲೋಕಪ್ರಿಯರಾಗಿದ್ದು ಪೆನಶನ್ ಪಡೆದಿದ್ದಾರೆ. ಇವರು ನಿಗರ್ವಿಗಳೂ, ಧಾರ್ಮಿಕ ಭಾವನೆಯುಳ್ಳವರೂ ಆಗಿದ್ದಾರೆ. ತಮ್ಮ ೧೮ನೆಯ ವಯಸ್ಸಿನಿಂದ ಈ ವರೆಗೂ ಐದು ಸಲ ನಮಾಜು ಮಾಡುತ್ತ ಇಹ ಪರಗಳ ಸಾಧನೆಯನ್ನು ಮಾಡತಕ್ಕವರೂ ಇದ್ದಾರೆ. ಇವರಿಗೆ “ ಮೋಹತಮದ ಪೋಲೀಸ ” ಅನ್ನುತ್ತಾರೆ. ಈ ಅಧಿಕಾರಿಗಳಿಗೆ ಪ್ರತಿ ತಿಂಗಳು ೩೨೫ ರೂ. ಪಗಾರ ಇರುತ್ತದೆ.

ಪೋಲೀಸ ಮೋಹತಮಿೂಮ ಸಾಹೇಬರ ಕೈಕೆಳಗೆ ಇಬ್ಬರು ಸರಕಲ್ ಇನಸ್ಪೆಕ್ಟರರು ಇರುತ್ತಾರೆ. ಸರಕಲ್ಲ ಇನಸ್ಪೆಕ್ಟರರ ಪ್ರತಿ ತಿಂಗಳದ ಪಗಾರ ೧೦೦ ರೂ. ಇರುತ್ತದೆ.

ಕೊಪ್ಪಳದ ಸರಕಲ್ಲ ಇನಸ್ಪೆಕ್ಟರರು ಒಳ್ಳೇ ಜಾಣರೂ, ಭಿಡೆ ಮುರುವತ್ತುಗಳಿಗೆ ಆಸ್ಪದ ಕೊಡದವರೂ, ಕಾರ್ಯದಕ್ಷರೂ ಆಗಿದ್ದಾರೆ. ಈಗಿನ

ಸರ್ಕಲ್ ಇನಸ್ಪೆಕ್ಟರ ಸ್ಥಳದಲ್ಲಿ **ಮಿ. ಮೌಲ್ವಿ ಸೈಯ್ಯದ ಉಮರ** ಸಾಹೇ
ಇದ್ದಾರೆ.

ಸರ್ಕಲ್ ಇನಸ್ಪೆಕ್ಟರರ ಕೈಕೆಳಗೆ ( ಸಬ್ ಇನಸ್ಪೆಕ್ಟರ ಆಫ ಪೋಲೀಸ್) ಅಮೀನಸಾಹೇಬರು ೧೧ ಜನರು ಇದ್ದಾರೆ. ಕೊಪ್ಪಳ ಜಿಲ್ಹೆಯಲ್ಲಿ ಅಳವುಂಡಿ ಹಿಟ್ನಾಳ, ಕುಕನೂರು, ಯಲಬುರ್ಗಾ, ಕೊಪ್ಪಳಗಳಲ್ಲಿ ಇವರ ಕಚೇರಿಗಳು ಇರುತ್ತವೆ. ದುಂದಗಲ್ಲ ಜಿಲ್ಹೆಯಲ್ಲಿ ಕೋಸಗಿ, ಅಜೆಂಟಾ, ರಾಯಗೀರ, ಪೆಂಡಿಯಾಲ, ಲಿಂಗೋಜಿಗೂಡ ದುಂದಗಲ್ಲುಗಳಲ್ಲಿ ಇವರ ಕಚೇರಿಗಳಿರುತ್ತವೆ. ಅಮೀನಸಾಹೇಬರ ಪ್ರತಿತಿಂಗಳದ ಪಗಾರ ೪೦ ರಿಂದ ೧೦೦ ರೂ. ಗಳ ವರೆಗೆ ಇರುತ್ತದೆ. ಜಾಗೀರಿಯಲ್ಲಿ ೩೨೫ ಸಣ್ಣ ಅಧಿಕಾರಿಗಳೂ ೮ ಜನ ಕುದುರೆ ಸವಾರರೂ ಇರುತ್ತಾರೆ.

ಈ ಖಾತೆಯ ವಾರ್ಷಿಕ ವೆಚ್ಚವು ಸುಮಾರು ೮೦ ಸಾವಿರ ರೂಪಾಯಿ ಇರಬಹುದೆಂದು ತಿಳಿಯುತ್ತದೆ. ಜಾಗೀರಿಯಲ್ಲಿ ( ಸಿ. ಆಯ. ಡಿ. ) ಗುಪ್ತ ಪೋಲಿಸಖಾತೆಯೂ ಇರುತ್ತದೆ.

## ಇಂಜನಿಯರಿಂಗ ಖಾತೆ.

ಜಹಗೀರಿಯ ಪ್ರತಿಯೊಂದು ಜಿಲ್ಹೆಗಳಲ್ಲಿ ಸುಪರಿಂಟೆಂಡಿಂಗ ಇಂಜನಿಯರರೆಂಬ ಅಧಿಕಾರಿಗಳಿರುತ್ತಾರೆ.

ಈ ಖಾತೆಯವರು ಕಾಲುವೆ ಹಾಗು ಕಟ್ಟಡಗಳ ಜೀರ್ಣೋದ್ಧಾರ ಮಾಡುತ್ತಾರೆ. ಕೊಪ್ಪಳ ಜಿಲ್ಹೆಯಲ್ಲಿ ತುಂಗಭದ್ರಾ ನದಿಯ ಕಾಲುವೆಗಳಿಂದ ನೀರನ್ನು ರೈತರ ಗದ್ದೆಗಳಿಗೆ ಸರಿಯಾಗಿ ಮುಟ್ಟಿಸಲಿಕ್ಕೆ ದರೋಗನೆಂಬ ಅಧಿಕಾರಿಯನ್ನು ನೇಮಿಸಲಾಗಿದೆ. ಈ ಖಾತೆಗೆ ವಾರ್ಷಿಕ ವೆಚ್ಚವು ೨೨ ಸಾವಿರ ರೂಪಾಯಿ ಇರುತ್ತದೆ.

## ವೈದ್ಯಕೀಯ ಖಾತೆ.

ಜಾಗೀರಿಯಲ್ಲಿ ಆರು ಕಡೆಗೆ ದವಾಖಾನೆಗಳಿರುತ್ತವೆ, ಹೈದರಾಬಾದದಲ್ಲಿ **ಚೀಫ ಮೆಡಿಕಲ್ ಆಫೀಸರ ಇರುತ್ತಾರೆ.** ಈಗಿನ **ಚೀಫ ಮೆಡಿಕಲ್**

ಆಫೀಸರು ಮಿ|| ಎಂ. **ಆರ್. ವಾಡಿಯಾ** ಅವರು ಇರುತ್ತಾರೆ. ಲಂಡನ್ ಎಫ್. ಆರ್. ಸಿ. ಎಸ್. ,ಇಂಗ್ಲಂಡದ ಎಂ. ಆರ್. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇವರಿಗೆ ಪ್ರತಿ ತಿಂಗಳು ೫೦೦ ರೂಪಾಯಿ ಪಗಾರ ಇರುತ್ತದೆ.

ಕೊಪ್ಪಳ ದವಾಖಾನೆಯಲ್ಲಿ ಡಾಕ್ಟರ " **ಸಿಮ್ಸನ್ ಪಾಲ** " ಎಂಬ ಅಧಿಕಾರಿಗಳಿದ್ದು ಇವರು ಮದ್ರಾಸ ಯುನಿವ್ಹರ್ಸಿಟಿಯಿಂದ ಬಂಗಾರದ ಪದಕವನ್ನು ಪಡೆದಿದ್ದಾರೆ. ಡಾಕ್ಟರ ಪಗಾರ ಪ್ರತಿತಿಂಗಳಿಗೆ ೫೦ ರಿಂದ ೧೦೦ ರೂಪಾಯಿ ಇರುತ್ತದೆ.

ಜಾಗೀರಿಯಲ್ಲಿ ಯುನಾನೀ ಹಕೀಮರಿಗೂ ಜಾಗೀರಿ ಸರಕಾರದಿಂದ ಗ್ರ್ಯಾಂಟ ದೊರೆಯುತ್ತದೆ.

ತಾಲೂಕಿಗೆ ಒಬ್ಬರಂತೆ ಮೈಲೀಕಾರಕೂನರನ್ನು ನೇಮಿಸಲಾಗಿದೆ.

ಕೊಪ್ಪಳದ ದವಾಖಾನೆಯಲ್ಲಿ ಸನ್ ೧೯೩೮ ನೆ ಇಸ್ವಿಯಲ್ಲಿಯ ೨೮ ಸಾವಿರ ರೋಗಿಗಳ ಚಿಕಿತ್ಸೆ ಮತ್ತು ೭೦೦ ಮಕ್ಕಳಿಗೆ ಮೈಲೀ ತೆಗೆದ ದಾಖಲೆಗಳಿಂದ ಆರೋಗ್ಯಕಾರ್ಯ ಭರದಿಂದ ಸಾಗಿರುವದೆಂದು ಹೇಳಬಹುದಾಗಿದೆ. ಹೈದರಾಬಾದದಲ್ಲಿರುವ ದವಾಖಾನೆಯ ವೆಚ್ಚವನ್ನು ಜಾಗೀರಿ ಸರಕಾರವೇ ನೋಡಿಕೊಳ್ಳುತ್ತದೆ. ತಾಲೂಕುಗಳಲ್ಲಿಯ ದವಾಖಾನೆಗಳ ವೆಚ್ಚವನ್ನು ಲೋಕಲ್‌ಫಂಡಿನ ಖಾತೆಯಿಂದ ಕೊಡಲಾಗುತ್ತದೆ. ಈ ಖಾತೆಯ ವಾರ್ಷಿಕ ವೆಚ್ಚವು ೨೦ ಸಾವಿರ ಇರಬಹುದೆಂದು ತಿಳಿಯುತ್ತದೆ.

## ಶಿಕ್ಷಣಖಾತೆ.

ನವಾಬ ಸಾಲಾರಜಂಗ ಬಹದ್ದೂರರವರ ಜಾಗೀರಿಯಲ್ಲಿ ಶಿಕ್ಷಣಖಾತೆಗೆ ದೊರೆತಷ್ಟು ಬೆಂಬಲವೂ ಸಹಾಯವೂ ನಿಜಾಮ ಇಲಾಖೆಯಲ್ಲಿನ ಇನ್ನಾವ ಜಾಗೀರಿಗೂ ದೊರೆತಿಲ್ಲ. ತಮ್ಮ ಪ್ರಜೆಗಳ ಶಿಕ್ಷಣದ ಬಗ್ಗೆ ಸ್ವತಃ ನವಾಬ ಸಾಹೇಬರು ಅತ್ಯಂತ ಆಸ್ಥೆಯುಳ್ಳವರಾಗಿದ್ದಾರೆ. ಜಾತಿ ಪಂಥಗಳ ಭೇದ

ಭಾವವನ್ನೆಣಿಸದೆ, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲಿಕ್ಕೆ ಎಲ್ಲರಿಗೂ ಸಮಾನವಾದ ಸೌಕರ್ಯಗಳನ್ನು ಒದಗಿಸಲಾಗಿದೆ.

ಕೊಪ್ಪಳದಲ್ಲಿ ಒಂದು ಹಾಯಸ್ಕೂಲ ಇದ್ದು, ಮಿಗಿಲಾದ ಶಿಕ್ಷಣ ಮತ್ತು ಅಚ್ಚುಕಟ್ಟಾದ ಆಡಳಿತೆಗಳ ಬಗ್ಗೆ ಅದು ಸುತ್ತು ಮುತ್ತಲಿನ ಬ್ರಿಟಿಶ ಹಾಗೂ ನಿಜಾಮ ತಾಲೂಕುಗಳಲ್ಲಿ ಪ್ರಸಿದ್ಧವಾಗಿದೆ.

ಇಲ್ಲಿಯ ಹೆಡ್ ಮಾಸ್ತರರಾದ **ಮಿರ್ಝಾ ಸರಫ್‌ರಾಜ ಅಲಿ** ಬಿ. ಎ. ಎಚ್. ಡಿಪ್. ಎಡ್. (ಡಬ್ಲಿನ್) ಇವರು ಸರ್ಕಾರ ಆಲಿಯವರಿಂದ ದೊರೆತವರಿದ್ದು ಶಿಕ್ಷಕರಲ್ಲಿಯೂ, ವಿದ್ಯಾರ್ಥಿಗಳಲ್ಲಿಯೂ, ಅವರ ಪಾಲಕ ರಲ್ಲಿಯೂ ಅಲ್ಹಾದಕರವಾದ ವಾತಾವರಣವನ್ನು ನಿರ್ಮಿಸಿ ಶಾಲೆಯನ್ನು ಮೆಚ್ಚುಗೆಯ ಸ್ಥಳವನ್ನಾಗಿ ಮಾಡಿದ್ದಾರೆ. ಹಲವು ಪದವೀಧರ ಶಿಕ್ಷಕರು ಇವರ ಸಹಾಯಕರಾಗಿದ್ದಾರೆ.

ಶಾಲೆಗಳ ಇನಸ್ಪೆಕ್ಟರರ (ತಾಲೀಮಾತ್ ಮೋಹತ್‌ಮೀಮ) ಅಧಿಕಾ ರವನ್ನು ಸಹ ಮಿರ್ಝಾ ಸರ್ ಫರಾಜ ಅಲಿಯವರಿಗೇ ಒಪ್ಪಿಸಲಾಗಿದೆ. ಇವರ ಆಡಳಿತದಲ್ಲಿ ಮೂರು ಹೊಸ ಶಾಲೆಗಳು ತೆರೆಯಲ್ಪಟ್ಟಿದ್ದು ೯೦೦ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ. ಶಾಲೆಗಳಿಗಾಗಿ ಹೊಸ ಕಟ್ಟಡಗಳನ್ನು ಕಟ್ಟಿಸುವದೂ ನಡೆದಿದೆ. ತಾಲೀಮಾತ ಮೋಹತಮಿಮ ಸಾಹೇಬರಿಗೆ ನೆರವಾಗಲಿಕ್ಕೆ ಒಬ್ಬ ಡೆಪ್ಯುಟಿ ಇನ್ಸಪೆಕ್ಟರ (ನಾಝಿರ) ಇದ್ದು, ಆ ಸ್ಥಳಕ್ಕೆ ಮಿ|| **ಬಿಷ್ಣೋಪಂತ ಬಿಸನಳ್ಳಿ** ಇವರನ್ನು ನಿಯಮಿಸಲಾಗಿದೆ.

## ಪ್ರಾಥಮಿಕ ಶಾಲೆಗಳು.

ಕೊಪ್ಪಳ ಜಿಲ್ಹೆಯಲ್ಲಿ ೩೦ ಪ್ರಾಥಮಿಕ ಶಾಲೆಗಳಿರುವವು. ಅವುಗಳಲ್ಲಿ ಸುಮಾರು ೩೦೦೦ ವಿದ್ಯಾರ್ಥಿಗಳು ಶಿಕ್ಷಣ ಹೊಂದುತ್ತಿರುವರು. ಹಳ್ಳಿಗಳ ಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ೪ನೆಯ ಇಯತ್ತೆಯ ವರೆಗೆ ಕನ್ನಡದ ಮುಖಾಂತರವಾಗಿ ಶಿಕ್ಷಣ ಕೊಡಲಾಗುತ್ತದೆ.

## ಹೆಣ್ಣು ಮಕ್ಕಳ ಶಾಲೆ.

ಕೊಪ್ಪಳದಲ್ಲಿ ಒಂದು ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆ ಇದ್ದು ಅಲ್ಲಿ ಕನ್ನಡ-ಉರ್ದು ಭಾಷೆಗಳ ವಿದ್ಯಾಭ್ಯಾಸವಾಗುತ್ತದೆ. ಐದು ಜನ ಶಿಕ್ಷಕಿಯರು ಇರುತ್ತಾರೆ.

## ಹರಿಜನ ಶಾಲೆ.

ಹಿಂದುಳಿದ ವರ್ಗದವರ ಸಲುವಾಗಿ ಕೊಪ್ಪಳದಲ್ಲಿ ಒಂದು ಹರಿಜನ ಶಾಲೆ ಇದೆ. ಮುಲಕೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಒಬ್ಬ ಶಿಕ್ಷಕ ನಿದ್ದು ಸುಮಾರು ೪೦ ಜನ ವಿದ್ಯಾರ್ಥಿಗಳಿರುವರು. ಈ ಶಾಲೆಗೆ ಲೋಕಲ್ ಫಂಡಿನಿಂದ ಪ್ರತಿ ತಿಂಗಳಿಗೆ ೧೦ ರೂ. ಗ್ರ್ಯಾಂಟು ದೊರೆಯುತ್ತದೆ.

## ಲೋಕಲ್ ಫಂಡ ಖಾತೆ.

ಕೊಪ್ಪಳದ ಲೋಕಲ್ ಫಂಡಿನ ಖಾತೆಯಿಂದ ವಿದ್ಯಾದಾನವೂ, ದವಾಖಾನೆಯ ವೆಚ್ಚವೂ ನಡೆಯುತ್ತದೆ. ನಗರದ ಸ್ವಚ್ಛತೆ ವಿದ್ಯುದ್ದೀಪಗಳ ವ್ಯವಸ್ಥೆಯೂ ಲೋಕಲ್ ಫಂಡಿನಿಂದ ಜರುಗುತ್ತದೆ. ಇವುಗಳ ಮೇಲ್ವಿಚಾರಣೆಗಾಗಿ ಸ್ಯಾನಿಟರಿ ಇನಸ್ಪೆಕ್ಟರ ಇದ್ದಾನೆ. ಸರಕಾರದ ಅಪ್ಪಣೆಯ ಮೇರೆಗೆ ಕೊಪ್ಪಳದ ಶ್ರೀಮಂತ್ ಮುದಗಲ್ಲ ಸಂಗಪ್ಪನವರು ವಿದ್ಯುದ್ದೀಪಗಳನ್ನು ಕೊಟ್ಟಿದ್ದಾರೆ. ಲೋಕಲ್ ಫಂಡಿನ ಉತ್ಪನ್ನವು ೫೦ ಸಾವಿರ ರೂಪಾಯಿಗಳಿದ್ದು ಕಲೆಕ್ಟರರೇ ಅಧ್ಯಕ್ಷರು. ಲೋಕಲ್ ಫಂಡಿನ ಸದಸ್ಯರು ⅓ ಭಾಗ ಸರಕಾರಿ ಅಧಿಕಾರಿಗಳಿದ್ದು ಉಳಿದವರು ಅಧ್ಯಕ್ಷರಿಂದ ಆರಿಸಲ್ಪಟ್ಟ ಮೆಂಬರರಿರುತ್ತಾರೆ.

## ಜಾಗೀರಿ ಸರಕಾರದ ಗಿರಣಿಗಳು.

ಜಾಗೀರಿಯಲ್ಲಿ ಎರಡು ಸರಕಾರಿ ಗಿರಣಿಗಳು ಇರುತ್ತವೆ. ದುಂದಗಲ್‌ದಲ್ಲಿ ಒಂದು ಕೊಪ್ಪಳದಲ್ಲಿ ಒಂದು ಹೀಗೆ ಎರಡು ಗಿರಣಿಗಳಿವೆ. ಈ ಗಿರಣಿಗಳಲ್ಲಿ ಹತ್ತಿ ಅರೆಯುವದು ಅರಳೆ ಗಂಟು ಕಟ್ಟುವದು ಮಾಡುತ್ತಾರೆ. ರೈತರ

ಹಿತಕ್ಕಾಗಿ ಈ ಗಿರಣಿಗಳನ್ನು ಹಾಕಿದ್ದಾರೆ. ಗಿರಣಿಯ ಮ್ಯಾನೇಜರರಿಗೆ ಪ್ರತಿ ತಿಂಗಳು ೨೦೦ ರೂ. ಪಗಾರ ಇರುತ್ತದೆ. ಕೊಪ್ಪಳ ಗಿರಣಿಯ ಪ್ರತಿ ತಿಂಗಳದ ವೆಚ್ಚವು ೧೦೦೦ ರೂಪಾಯಿ ಇರುತ್ತದೆ.

## ಜೀನುಗಳು.

ಕೊಪ್ಪಳದಲ್ಲಿ ಶ್ರೀಮಂತರ ಜೀನುಗಳಿದ್ದು ಸೇಂಗಾ ಒಡೆಯುವದು ಹತ್ತಿ ಅರೆಯುವದು ಬೀಸುವದು ನಡೆಯುತ್ತದೆ.

## ಬ್ಯಾಂಕುಗಳು.

ಕೊಪ್ಪಳದಲ್ಲಿ ಅರ್ಬನ್ ಬ್ಯಾಂಕು, ಮಹಾಲಕ್ಷ್ಮೀ ಬ್ಯಾಂಕು, ಕೋ-ಆಪರೇಟಿವ್ಹ ಸೋಸಾಯಿಟಿ ಬ್ಯಾಂಕು, ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ ಮತ್ತು ಶೇತಕಿ ಖಾತೆಯವರ ಬ್ಯಾಂಕುಗಳೂ ಇರುತ್ತವೆ.

## ವಾಚನಾಲಯುಗಳು.

ಕೊಪ್ಪಳ, ಅಳವುಂಡಿ, ಕುಕನೂರು, ಅಡೂರಗಳಲ್ಲಿ ವಾಚನಾಲಯುಗಳಿವೆ. ಅನೇಕ ಪುಸ್ತಕಗಳ ಸಂಗ್ರಹವೂ ವೃತ್ತಪತ್ರಗಳ ಸಂಗ್ರಹವೂ ಇದ್ದು ಸುವ್ಯವಸ್ಥೆಯಿಂದ ವಾಚನಾಲಯುಗಳು ನಡೆಯುತ್ತವೆ.

ಹಳ್ಳಿಗಳಲ್ಲಿರುವ ಚಿಕ್ಕವಾಚನಾಲಯುಗಳಲ್ಲಿ ಮೌಜೆ ಇಟಗಿ, ಮತ್ತು ಅಳವುಂಡಿಯ ವಾಚನಾಲಯುಗಳು ಮೇಲ್ತರಗತಿಯವಿದ್ದು ವಾಚಕರಿಗೆ ಆನಂದವನ್ನುಂಟುಮಾಡುತ್ತವೆ.

ಕೊಪ್ಪಳದಲ್ಲಿ ಗಜಾನನ ವಾಚನಾಲಯುವು ಸೊಗಸಾಗಿರುತ್ತದೆ. ಗ್ರಂಥಗಳೂ, ಕನ್ನಡ, ಮರಾಠಿ, ಉರ್ದು, ಇಂಗ್ಲಿಷ ವೃತ್ತಪತ್ರಗಳ ಸಂಗ್ರಹವೂ ಚನ್ನಾಗಿರುತ್ತದೆ. ವೀರಶೈವ ಜನರಲ್ ಲಾಯಬ್ರರಿಯಲ್ಲಿ ಶಿಸ್ತು ಅಚ್ಚುಕಟ್ಟಾಗಿರುತ್ತದೆ. ಗ್ರಂಥಗಳ ಯಾದಿಯನ್ನು ನೋಡಿದರೆ, ಯಾವ ಯಾವ ಗ್ರಂಥಗಳಿರುವವೆಂದು ಕೂಡಲೇ ಗೊತ್ತಾಗುತ್ತದೆ. ಮಾಸಿಕಗಳೂ, ವಾರಪತ್ರಗಳೂ, ದೈನಂದಿನ ಪತ್ರಗಳೂ ಈ ವಾಚನಾಲಯದಲ್ಲಿ ಓದುಗರಿಗೆ

ದೊರೆಯುತ್ತವೆ. ಫರ್ನಿಚರ ಸಾವಾನುಗಳೂ ಇರುತ್ತವೆ. ಈ ಮೊದಲು ಆಗಿ ಹೋದ ಭಾರತ ಮಹಾಪುರುಷರ ಭಾವಚಿತ್ರಗಳೂ, ಈಗಿನ ಮುಖಂಡರ ಚಿತ್ರಗಳೂ ಇಲ್ಲಿ ಇರುತ್ತವೆ. ರಾಜಭಕ್ತಿಯನ್ನು ವ್ಯಕ್ತಮಾಡುವದಕ್ಕಾಗಿ **ನವಾಬ ಸರ್ ಮೀರ ಉಸ್ಮಾನ ಅಲೀಖಾನ ಬಹದ್ದೂರ.** ಜಿ. ಸಿ. ಎಸ್. ಆಯ್., ಜಿ. ಬಿ. ಇ. **ಮುಮಾಲಿಕೆ ಮಹರೂಸಾ ಸರಕಾರ ಆಲೀ.** ಅವರ ಭಾವಚಿತ್ರವನ್ನೂ ಮತ್ತು H. E. **ನವಾಬ ಸಾಲಾರಜಂಗ** ಬಹದ್ದೂರರವರ ಭಾವಚಿತ್ರವನ್ನೂ ಹಾಕಿದ್ದಾರೆ. ಈ ವಾಚನಾಲಯು ವನ್ನು ನಾನು ಹೊಗಳುವದರಿಂದ ಪ್ರಯೋಜನವಿಲ್ಲ. ಇಸ್ವಿ ಸನ್ ೧೯೩೬ ರಲ್ಲಿ ಲೆಫ್ಟನೆಂಟ ಕರ್ನಲ್ ಮುಜಫರೋದ್ದೀನ ಸಾಹೇಬರು ಈ ವಾಚನಾಲಯಕ್ಕೆ ಭೆಟ್ಟೀಕೊಟ್ಟು ತಮ್ಮ ಆನಂದ ವ್ಯಕ್ತಮಾಡಿರುವದೇ ಸಾಕ್ಷಿಯಾಗಿರುವದು.

## ಮುನಸಿಪಲ್ ಬೋರ್ಡ.

ನವಾಬ ಸಾಹೇಬರ ಅಪ್ಪಣೆ (ಹುಕುಮಿನ) ಅನ್ವಯ ಕೊಪ್ಪಳದ ಮುನಸಿಪಲ್ ಬೋರ್ಡ ಅಸ್ತಿತ್ವದಲ್ಲಿ ಬಂದಿದೆ. ಇದು ತನ್ನ ಕಾರ್ಯಕ್ರಮು ವನ್ನು ಒಳ್ಳೇ ಉತ್ಸಾಹದಿಂದ ಸಾಗಿಸುತ್ತಲಿದೆ.

## ವಾರಫಂಡ.

ಈಗ ನಡೆದಿರುವ ಮಹಾಯುದ್ಧಕ್ಕೆ ನವಾಬಸಾಹೇಬರು ಸ್ವಹಸ್ತ ದಿಂದಲೂ ಪರಹಸ್ತದಿಂದಲೂ ತುಂಬಾ ಸಹಾಯ ಮಾಡಿ, ಆರ್. ಏ. ಎಫ್‌ದವರಿಗೆ ೧೫—೪—೧೯೪೧ನೆಯ ದಿವಸ (ಹರಿಕೇನ) ವಿಮಾನವನ್ನು ಕೊಡಿಸಿ ಘನಕೀರ್ತಿ ಸಂಪಾದಿಸಿರುತ್ತಾರೆ. ತವ್ಮು ಜಾಗೀರಿಯಲ್ಲಿ ವಾರ ಫಂಡಿಗೆ ಸಹಾಯಮಾಡಿದ ಸರಕಾರೀ ಅಧಿಕಾರಿಗಳಿಗೆ ಮತ್ತು ಮುಖಂಡರಿಗೆ ಅಭಿನಂದನೆಯ ಸಂದೇಶವನ್ನೂ ಕಳುಹಿಸುವ ಯೋಜನೆಯನ್ನು ನಡೆಸಿದ್ದಾರೆ.

## ಉಪಸಂಹಾರ.

ಪ್ರಿಯವಾಚಕರೇ, ನಮ್ಮ ಬಾದಶಹರಾದ **೬ನೆಯ ಜಾರ್ಜ ಚಕ್ರವರ್ತಿ**ಗಳವರಿಗೂ ಮತ್ತು **ಎಲಿಜಾಬೇಥ ಮಹಾರಾಜ್ಞಿ**ಯವರಿಗೂ, **ನವಾಬ**

**ಸರ್ ಮೀರ ಉಸ್ಮಾನ ಅಲೀಖಾನ ಬಹದ್ದೂರ** ಮುಮಾಲಿಕ ಮಹ ರೂಸಾ ಸರಕಾರ ಆಲಿಯವರಿಗೂ ನಮ್ಮನ್ನಾಳುವ **H. E. ನವಾಬ ಸಾಲಾರಜಂಗ ಬಹದ್ದೂರ**ರವರಿಗೂ ದೇವರು ಆಯುರಾರೋಗ್ಯಗಳನ್ನು ದಯಪಾಲಿಸಲೆಂದೂ ಈ ಮಹನೀಯರ ಹಸ್ತದಿಂದಲೇ ಭಾರತೀಯರ ಆಕಾಂಕ್ಷೆಗಳು ಬೇಗನೆ ಪೂರ್ಣವಾಗಲೆಂದೂ ಜಗದೀಶನನ್ನು ಪ್ರಾರ್ಥಿಸುವ.

## ನಮ್ಮ ರಾಷ್ಟ್ರವು ಏಳ್ಗೆ ಹೊಂದಲಿ.

ಸಮಾಪ್ತ